ಸಂಪುಟ 01 । ಸಂಚಿಕೆ 20 । ಭಾನುವಾರ 30 ನವೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ರಾಷ್ಟ್ರೀಯ ವೈಯಕ್ತಿಕ ಬಾಹ್ಯಾಕಾಶ ದಿನ

ಭಾವನಾತ್ಮಕ ಯೋಗಕ್ಷೇಮ, ಆರೋಗ್ಯಕರ ಸಂಬಂಧಗಳು ಮತ್ತು ಭದ್ರತೆಯ ಪ್ರಜ್ಞೆಗೆ ಅಗತ್ಯವಾದ ವೈಯಕ್ತಿಕ ಗಡಿಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಗೌರವಿಸುವುದನ್ನು ಉತ್ತೇಜಿಸಲು ರಾಷ್ಟ್ರೀಯ ವೈಯಕ್ತಿಕ ಬಾಹ್ಯಾಕಾಶ ದಿನವನ್ನು (ನವೆಂಬರ್ 30) ಆಚರಿಸಲಾಗುತ್ತದೆ. ಇದು ವ್ಯಕ್ತಿಗಳು ತಮ್ಮದೇ ಆದ ಸ್ಥಳಾವಕಾಶದ ಅಗತ್ಯತೆಗಳ ಬಗ್ಗೆ ತಿಳಿದಿರಬೇಕು ಮತ್ತು ಅವುಗಳನ್ನು ಗೌರವಯುತವಾಗಿ ಸಂವಹನ ನಡೆಸಬೇಕು, ಹಾಗೆಯೇ ಇತರರ ಗಡಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಗೌರವಿಸಬೇಕು, ವಿಶೇ?ವಾಗಿ ಸ್ಪರ್ಶ ಅಥವಾ ದೈಹಿಕ ಸಾಮೀಪ್ಯದ ಬಗ್ಗೆ. ಈ ದಿನವು ಸಾಮಾಜಿಕ ಸಂವಹನಗಳಿಗೆ ಹೆಚ್ಚು ಸಹಾನುಭೂತಿಯ ವಿಧಾನವನ್ನು ಪ್ರೋತ್ಸಾಹಿಸುತ್ತದೆ ಮತ್ತು ಸೂಕ್ಷ್ಮತೆ ಅಥವಾ ಹೆಚ್ಚುವರಿ ಸ್ಥಳಾವಕಾಶದ ಅಗತ್ಯವನ್ನು ಹೊಂದಿರುವವರನ್ನು ಬೆಂಬಲಿಸುತ್ತದೆ, ಇದನ್ನು ಕೆಲವೊಮ್ಮೆ ಪೀಚ್ ಚಿಹ್ನೆಯಿಂದ ಹೈಲೈಟ್ ಮಾಡಲಾಗುತ್ತದೆ.

## ಸುಭಾಷಿತ

ಮನುಷ್ಯನ ಬೆಳವಣಿಗೆಗೆ ಬೇಕಾದ
ಸ್ವಾರ್ಥವು ಅವನಲ್ಲಿರಬೇಕು. ಆದರೆ
ಮಿತಿ ಮೀರಿದ ಸ್ವಾರ್ಥವಿರಕೂಡದು.

ಶಿವರಾಮ ಕಾರಂತ

# ಶೀಘ್ರದಲ್ಲೇ ಮೇಕೆದಾಟು ವಿಸ್ತೃತ ಯೋಜನಾ ವರದಿ ಸಲ್ಲಿಕೆ :ಡಿಸಿಎಂ



ಬೆಂಗಳೂರು: ಮೇಕೆದಾಟು ಸಮತೋಲಿತ ಅಣೆಕಟ್ಟು ನಿರ್ಮಾಣಕ್ಕೆ ಶೀಘ್ರದಲ್ಲೇ ಕೇಂದ್ರ ಜಲ ಆಯೋಗಕ್ಕೆ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅಧಿಕಾರ ಹಂಚಿಕೆಯ ಗೊಂದಲಗಳ ಹಿನ್ನೆಲೆಯಲ್ಲಿ ಹೈಕಮಾಂಡ್ ಸೂಚನೆಯಂತೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಉಪಾಹಾರ ಕೂಟ ನಡೆಸಿದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯವಾಗಿ ಸಿದ್ದರಾಮಯ್ಯ ಅವರ ಹೇಳಿಕೆಗಳಿಗೆ ಬದ್ಧ ಎಂದು ಹೇಳುವ ನಡುವೆಯೇ, ಕೇಂದ್ರ ಸರ್ಕಾರದ ವಿರುದ್ಧವೂ ವಾಗ್ದಾಳಿ ನಡೆಸಿದರು. ಕೇಂದ್ರ ಸರ್ಕಾರ ಮೆಕ್ಕೆಜೋಳ, ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಸಹಕಾರ ನೀಡಲಿಲ್ಲ. ಇದನ್ನು ಸಂಸತ್ ಅಧಿವೇಶನದಲ್ಲಿ ನಮ ರಾಜ್ಯದ ಸಂಸದರು ಪ್ರಸ್ತಾಪಿಸಲು ಸಿದ್ದರಾಮಯ್ಯ ಅವರು ಪತ್ರ ಬರೆಯಲಿದ್ದಾರೆ. ಪ್ರಧಾನಮಂತ್ರಿಯವರ ಮೇಲೆ ಒತ್ತಡ ಹೇರಲು ದೆಹಲಿಗೆ ನಿಯೋಗ ಕರೆದುಕೊಂಡು ಹೋಗಲು ನಾವು ಪ್ರಯತ್ನಿಸುತ್ತೇವೆ. ಮೇಕೆದಾಟು ಸೇರಿದಂತೆ ಇತರ ನೀರಾವರಿ ಯೋಜನೆಗಳ ಬಗ್ಗೆಯೂ ಪ್ರಸ್ತಾಪಿಸುತ್ತೇವೆ. ಶೀಘ್ರವೇ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸುತ್ತೇವೆ ಎಂದರು.

ನಮ ಪಾಲಿನ ತೆರಿಗೆ ಅನುದಾನವನ್ನು ನ್ಯಾಯೋಚಿತವಾಗಿ ಪಡೆಯಲು ಕೂಡ ಕ್ರಮ ಕೈಗೊಳ್ಳುವುದಾಗಿ ಹೇಳಿದರು.ರಾಜ್ಯದಲ್ಲಿ ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯ, ನಿಲುವಳಿ ಸೂಚನೆ ಸೇರಿದಂತೆ ಏನು ಬೇಕಾದರೂ ಮಾಡಿಕೊಳ್ಳಲಿ. ಅದಕ್ಕೆ ತಕ್ಕ ಉತ್ತರ ನೀಡಲು ನಮಗೆ ಸಾಮರ್ಥ್ಯವಿದೆ ಎಂದರು. ದೇಶದಲ್ಲಿ ಪಕ್ಷ ಸಂಕಷ್ಟದಲ್ಲಿದೆ.

4ನೇ ಪುಟಕ್ಕೆ

## ಮಸ್ಕಿ ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯದರ್ಶಿಯಾಗಿ ಆಯ್ಕೆಯಾದ ಲಕ್ಷ್ಮಣ ಕರ್ಲಿ ಅವರಿಗೆ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್



ಮಸ್ಕಿ ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಕಾರ್ಯದರ್ಶಿಯಾಗಿ ಆಯ್ಕೆಯಾದ ಲಕ್ಷ್ಮಣ ಕರ್ಲಿ ಅವರನ್ನು ಪದ್ಮಶಾಲಿ ಸಮಾಜದ ಪ್ರಮುಖರು ಮಸ್ಕಿ ನಗರದಲ್ಲಿ ಸನ್ಮಾನಿ ಸಿದರು ಪದ್ಮಶಾಲಿ ಸಮಾಜದ ಪ್ರಮುಖರಾದ ಮಲ್ಲಯ್ಯ ಪಗಡೇಕಲ್, ಮಲ್ಲಿಕಾರ್ಜುನ ಶ್ಯಾಸಲ್, ಡಾ. ಶಂಕರ ಕರ್ಲಿ, ಪರಶುರಾಮ ಕೊಡಗುಂಟಿ, ವೀರೇಶ ಪೂಜಾರಿ ಇನ್ನಿತರರು ಉಪಸ್ಥಿತರಿದ್ದರು.

## ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರಿಗೆ ಗೌರವ ಡಾಕ್ಟರೇಟ್




❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ವತಿಯಿಂದ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲರಾದ ಥಾವರ್‌ಚಂದ್ ಗೆಹೋಟ್ ಅವರು ಪ್ರದಾನ ಮಾಡಿದರು. ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿ ಮಾತನಾಡಿದ ಸ್ಪೀಕರ್ ಯು.ಟಿ. ಖಾದರ್ ಅವರು "ಪ್ರತಿಷ್ಠಿತ ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಸ್ವೀಕರಿಸಿರುವುದು ಸಾಕಷ್ಟು ಹೆಮ್ಮೆ ಮತ್ತು ಸಂತಸದ ವಿಷಯವಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿಯಿಂದ ಗೌರವದ ಜೊತೆಗೆ ಜವಾಬ್ದಾರಿ ಕೂಡ ಹೆಚ್ಚಾಗಿದೆ. ಭವಿಷ್ಯದಲ್ಲೂ ಬೆಂಗಳೂರು ವಿಶ್ವವಿದ್ಯಾಲಯದ ಮೌಲ್ಯವನ್ನು, ವಿಶ್ವಾಸವನ್ನು ಎತ್ತಿ ಹಿಡಿಯುವ ದಾರಿಯಲ್ಲಿ ಸಾಗುತ್ತೇನೆ" ಎಂದು ತಿಳಿಸಿದರು. "ಕಾಲೇಜು ದಿನಗಳಲ್ಲಿ ಡಾಕ್ಟರ್ ಆಗಬೇಕೆಂಬ ಕನಸಿತ್ತು. ಆದರೆ ವಿಜ್ಞಾನ ವಿಷಯದಲ್ಲಿ ಅಂಕಗಳು ಕಡಿಮೆ ಬರುತ್ತಿತ್ತು. ಹಾಗಾಗಿ ಇದು ಆಗದ ಕೆಲಸ ಎಂದು ಡಾಕ್ಟರ್ ಕನಸು ಬಿಟ್ಟು ಕಾನೂನು ವಿಷಯಕ್ಕೆ ಸೇ-ರಿದೆ, ಆದರೆ ಮುಂದೆ ಆರೋಗ್ಯ ಸಚಿವನಾಗಿ ಕಾರ್ಯ ನಿರ್ವಹಿಸುವ ಅವಕಾಶ ಲಭಿಸಿತು. ಡಾಕ್ಟರ್ ಆಗದಿದ್ದರೂ ಇಂದು ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ಡಾಕ್ಟರೇಟ್ ಲಭಿಸಿರುವುದು ಸಾಕಷ್ಟು ಖುಷಿಯ ವಿಷಯ. ಈ ಪ್ರೀತಿ, ಸಹಕಾರ ಸದಾ ನೆನಪಿನಲ್ಲಿಟ್ಟುಕೊಳ್ಳುತ್ತೇನೆ" ಎಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳು ಡಾ. ಜಯಕರ ಎಸ್.ಎಂ, ಕುಲಸಚಿವ ಕೆ.ಟಿ.ಶಾಂತಲಾ, ಕುಲಸಚಿವ ಮೌಲ್ಯಮಾಪನ ಪ್ರೊ.ಸಿ.ಎಸ್.ಕ-ರಿಗಾರ್ ಸೇರಿದಂತೆ ಹಿರಿಯ ಅಧಿಕಾರಿಗಳು, ಸಿಂಡಿಕೇಟ್ ಸದಸ್ಯರು, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಉಪಸ್ಥಿತರಿದ್ದರು.

## ತುಂಗಭದ್ರಾ ನದಿಗೆ ಅಡ್ಡಲಾಗಿ ಸೇತುವೆ-ಕಂ-ಬ್ಯಾರೇಜ್ ಯೋಜನೆಗೆ ಆಂಧ್ರ ಪ್ರದೇಶ ಸಚಿವರೊಂದಿಗೆ ಎನ್ ಎಸ್ ಬೋಸರಾಜ್ ಸಭೆ

❏ ನೈಜ್ಯ ದೆಸೆ ನ್ಯೂಸ್



ಆಂಧ್ರಪ್ರದೇಶ ಜಲಸಂಪನ್ಮೂಲ ಸಚಿವರಾದ ಶ್ರೀ ನಿಮಲಾ ರಾಮ ನಾಯ್ಡು ಮತ್ತು ಮಾನ್ಯ ಕೈಗಾರಿಕಾ ಸಚಿವರಾದ ಶ್ರೀ ಟಿ.ಜಿ. ಭರತ್, ಆಂಧ್ರಪ್ರದೇಶ ಸರ್ಕಾರದೊಂದಿಗೆ ಸಭೆ ನಡೆಸಿದ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪರಿಷತ್ತಿನ ಸಭಾ ನಾಯಕರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್ ಎಸ್ ಬೋಸರಾಜು ಜಿ ಅವರು.

ನಮ್ಮ ಚರ್ಚೆಗಳು ತುಂಗಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಸೇತುವೆ-ಕಂ-ಬ್ಯಾರೇಜ್ ಯೋಜನೆಯ ಮೇಲೆ ಕೇಂದ್ರೀಕರಿಸಿದೆ. ನಮ್ಮ ಹಂಚಿದ ಗಡಿಯಲ್ಲಿ. ಚಿಕಲಪರ್ವಿ ಮತ್ತು ಚಿಕ್ಕಮಂಚಲೆ ಬಳಿ (ಮಂತ್ರಾಲಯಕ್ಕೆ ಹತ್ತಿರ) ಬ್ಯಾರೇಜ್‌ಗಳನ್ನು ನಿರ್ಮಿಸುವ ಅಗತ್ಯವನ್ನು ನಾವು ಔಪಚಾರಿಕವಾಗಿ ಪ್ರಸ್ತುತಪಡಿಸಿದ್ದೇವೆ. ಈ ಯೋಜನೆಗಳು ಎರಡೂ ರಾಜ್ಯಗಳ ಸಾವಿರಾರು ರೈತರಿಗೆ ನೀರಿನ ಭದ್ರತೆಯನ್ನು ಖಾತರಿಪಡಿಸುವ ನೀರಿನ ಲಭ್ಯತೆಯನ್ನು ಗಣನೀಯವಾಗಿ ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿವೆ. ಸಭೆಯಲ್ಲಿ, ಈ ಉಪಕ್ರಮಗಳ ಸಕಾಲಿಕ ಮತ್ತು ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಆಂಧ್ರ ಪ್ರದೇಶ ಸರ್ಕಾರದಿಂದ ಸಹಕಾರಕ್ಕಾಗಿ ನಾವು ನಮ್ಮ ವಿನಂತಿಯನ್ನು ವ್ಯಕ್ತಪಡಿಸಿದ್ದೇವೆ.

## ಕೋನಾಪುರ ಪೇಟೆ ಪ್ರೌಢ ಶಾಲೆಯಲ್ಲಿ ಉಚಿತ ಯೋಗ ಕಾರ್ಯಾಗಾರ

❏ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಯೋಗ ಸನ್ನಿದಿ ಜ್ಞಾನ ವಿದ್ಯಾಪೀಠ ಟ್ರಸ್ಟ್(ರಿ) ವತಿಯಿಂದ ಕೋನಾಪುರ ಪೇಟೆ ಪ್ರೌಢ ಶಾಲೆಯಲ್ಲಿ ಶಾಲಾ ಮಕ್ಕಳಿಗಾಗಿ ಒಂದು ದಿನದ ಯೋಗ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಮುನ್ನಡೆಸಿದ ಯೋಗ ಗುರು ಅನ್ನದಾನಯ್ಯ ಅವರು ತ್ರಿಕೋಣಾಸನ, ಪರಿವೃತ್ತ ತ್ರಿಕೋಣಾಸನ, ಗೋಮುಖಾಸನ, ಜಾನುಶಿರಶಾಸನ, ವೃಕ್ಷಾಸನ, ಪಾದಹಸ್ತಾಸನ ಸೇರಿದಂತೆ ಹಲವು ಯೋಗಾಸನಗಳನ್ನು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಿದರು. ಜೊತೆಗೆ ನಾಡೀ ಶುದ್ಧಿ ಪ್ರಾಣಾಯಾಮ, ಬ್ರಹ್ಮರಿ ಪ್ರಾಣಾಯಾಮ ಹಾಗೂ ಮುದ್ರೆಗಳ ವೈಜ್ಞಾನಿಕ ಮಹತ್ವವನ್ನು ವಿವರಿಸಿದರು.



ಕಾರ್ಯಕ್ರಮದ ಕೊನೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯ ಗುರು ವಿರುಪಾಕ್ಷಪ್ಪ ಅವರು, ಕಳೆದ ಹತ್ತು ವರ್ಷಗಳಿಂದ ಮಾನ್ವಿ ನಗರದಲ್ಲಿನ ಸರ್ಕಾರಿ ಶಾಲೆಗಳಲ್ಲಿ ಉಚಿತವಾಗಿ ಯೋಗ ಸೇವೆ ನೀಡುತ್ತಾ ಬಂದಿರುವ ಯೋಗ ಗುರು ಅನ್ನದಾನಯ್ಯ ಅವರ ಸೇವೆ ಶ್ಲಾಘನೀಯವಾಗಿದೆ ಎಂದು ಪ್ರಶಂಸಿಸಿದರು. ನಂತರ ಶಾಲಾವತಿಯಿಂದ ಯೋಗ ಗುರು ಅನ್ನದಾನಯ್ಯ ಅವರಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಸಹ ಶಿಕ್ಷಕರಾದ ವಿಜಯಕುಮಾರ್ ಸಂಜೀವಪ್ಪ, ರಘುನಂದನ್ ರಾಮಸ್ವಾಮಿ, ಪೈಮುದ್ದೀನ್, ಅತಿಥಿ ಶಿಕ್ಷಕರಾದ ನವೀನ್ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಮಸ್ಕಿಯಲ್ಲಿ ಬಿಜೆಪಿ ವತಿಯಿಂದ ವಿವಿಧ ಬೇಡಿಕೆ ಈಡೇರಿಕೆ ಆಗ್ರಹಿಸಿ ಬೃಹತ್ ಪ್ರತಿಭಟನೆ

❏ ನೈಜ್ಯ ದೆಸೆ ನ್ಯೂಸ್




ಮಸ್ಕಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರೈತರ ಪಾಲಿಗೆ ಯಮಕಿಂಕರವಾಗಿದೆ ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ತೀವ್ರ ವಾಗ್ದಾಳಿ ನಡೆಸಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಮಸ್ಕಿ ಪಟ್ಟಣದ ಬಸವೇಶ್ವರ ನಗರದಲ್ಲಿರುವ ಬಿಜೆಪಿ ಪಕ್ಷದ ಕಛೇರಿಯಿಂದ ಹಳೆಬಸ್ ನಿಲ್ದಾಣದವರೆಗೆ ಶನಿವಾರ ಬೃಹತ್ ಪ್ರತಿಭಟನೆ ನಡೆಸಿ ನಂತರ ಮಾತನಾಡಿದ ಅವರು ಮುಂಗಾರು ಬೆಳೆಗಳಿಗೆ ಅತಿವೃಷ್ಟಿ ಮಳೆಯಾಗಿದ್ದ-ರಿಂದ ತೊಗರಿ, ಹತ್ತಿ, ಮೆಣಸಿನಕಾಯಿ, ಸೂರ್ಯಕಾಂತಿ, ಸಜ್ಜಿ ಸೇರಿದಂತೆ ಭತ್ತಕ್ಕೆ ವೈರಸ್ ಬಂದ್ದರಿಂದ ರೈತರು ಈ ಭಾರಿ ನಷ್ಟದಲ್ಲಿದ್ದಾರೆ. ಮಳೆಯಿಂದ ಹಾನಿಯಾದ ಬೆಳೆಗಳಿಗೆ ಇನ್ನೂ ಪರಿಹಾರ ದೊರೆತ್ತಿಲ್ಲ. ಇತ್ತ ನೀರಾವರಿ ಪ್ರದೇಶದ ರೈತರಿಗೆ ಮುಂಗಾರಿ ಹಂಗಾಮಿನಲ್ಲಿ ನಾಟಿ ಮಾಡಿದ ಭತ್ತ ವೈರಸ್ ಬಂದಿದ್ದರಿಂದ ಎಕರೆಗೆ 18-20 ಚೀಲ ಇಳುವರಿ ಬಂದಿದೆ. ಗುತ್ತಿಗೆ ಮಾಡಿದ ರೈತರ ಗೋಳು ಕೇಳಲಾಗುತ್ತಿಲ್ಲ. ಡ್ಯಾಂನಲ್ಲಿ 80 ಟಿಎಂಸಿ ನೀರು ಇದ್ದರೂ ಸಹ ಕಾಂಗ್ರೆಸ್ ಸರ್ಕಾರ ರೈತರ ಎರಡನೇ ಬೆಳೆಗೆ ನೀರು ಹರಿಸುತ್ತಿಲ್ಲ.

2ನೇ ಬೆಳೆಗೆ ನೀರು ಹರಿಸದಿದ್ದರೆ ಎಕರೆಗೆ 25 ಸಾವಿರ ಪರಿಹಾರ ರೈತರ ಖಾತೆಗಳಿಗೆ ಜಮೆ ಮಾಡಬೇಕೆಂದರು. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಸಣ್ಣ ರೈತರಿಗೆ ಸಹಾಯಧನ ನೀಡಿ ಕೃಷಿ ಪರಿಕರಗಳನ್ನು ಕೊಡಿಸುತ್ತಿತ್ತು. ಸಮರ್ಪಕ ನೀರು ನಿರ್ವಹಣೆ ಮತ್ತು ಉತ್ತಮ ಪಸಲಿಗೆ, ಬೆಂಬಲ ಬೆಲೆಯಲ್ಲಿ ಖರೀಧಿ ಕೇಂದ್ರಗಳ ಮೂಲಕ ತೊಗರಿ, ಜೋಳ, ಭತ್ತ ಖರೀಧಿಸಿ, ಪ್ರೋತ್ಸಾಹಧನದ ಜತೆ ಹಣ ಸಂದಾಯ ಮಾಡಲಾಗತ್ತಿತ್ತು. ಆದ-'ರೆ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳಿಗೆ ಆದ್ಯತೆ ಕೊಟ್ಟು, ರೈತರಿಗೆ ಸಿಗಬೇಕಿದ್ದ ಎಲ್ಲಾ ಸೌಲತ್ತುಗಳನ್ನು ಕತ್ತರಿಸಿ, ಅವರ ಬದುಕುಗಳನ್ನು ಬೀದಿಗೆ ತಂದು ನಿಲ್ಲಿಸಿದ್ದಾರೆಂದು ದೂರಿದರು.

ಯೋಜನೆ ನೆನೆಗುದಿಗೆ: ತಾಲೂಕಿನಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಾದ ನಂದವಾಡಗಿ ಏತ ನೀರಾವರಿ, ಕೆರೆ ತುಂಬುವ ಯೋಜನೆಗಳನ್ನು ಮತ್ತು ಎನ್ನಾರ್ಬಿಸಿ 5ಎ ಕಾಲುವೆ ಕಾಮಗಾರಿಗಳು ನೆನೆಗುದಿಗೆ ಬಿದ್ದಿವೆ.

ಚುನಾವಣೆಯಲ್ಲಿ ಅಸ್ತ್ರವಾಗಿ ಬಳಿಸಿಕೊಂಡು ಅಧಿಕಾರಕ್ಕೆ ಬಂದಿರುವ ಶಾಸಕರು ರೈತರ ಬಗ್ಗೆ ಕಾಳಜಿ ಇದ್ದರೆ. ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ ನೀರು ಹರಿಸಬೇಕೆಂದರು.

ಕುರ್ಚಿ ಕಿತ್ತಾಟದಲ್ಲಿ ಸರ್ಕಾರ ಮುಳುಗಿದೆ : "ಮುಖ್ಯಮಂತ್ರಿ ಕುರ್ಚಿಗಾಗಿ ಕಾಂಗ್ರೆಸ್‌ನಲ್ಲಿ ಕಿತ್ತಾಟ ನಡೆಯುತ್ತಿದೆ. ಇತ್ತ ರೈತರು ಬೆಳೆ ಬೆಳೆಗಳಿಗೆ ಸೂಕ್ತ ಬೆಲೆ ಸಿಗುತ್ತಿಲ. ಕೂಡಲೇ ರಾಜ್ಯ ಸರ್ಕಾರ ತಾಲೂಕಿನಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ಬೆಂಬಲ ಬೆಲೆಯಲ್ಲಿ ಬೆಳೆಗಳನ್ನು ಖರೀದಿಗೆ ಮುಂದಾಗಬೇಕೆಂದು ಒತ್ತಾಯಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ಮಲ್ಲಪ್ಪ ಅಂಕುಶದೊಡ್ಡಿ, ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಡಾ. ಬಿ.ಚ್.ದಿವಟರ್ ಪಾಟೀಲ್, ಬಸವರಾಜ್ ಸ್ವಾಮಿ ಹಸಮಕಲ್ ಸೇರಿದಂತೆ ನೂರಾರು ಬಿಜೆಪಿ ಕಾರ್ಯಕರ್ತರು ಇದ್ದರು.

ಕೋಟ್ :ತಾಲೂಕಿನಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಾದ ನಂದವಾಡಗಿ ಏತ ನೀರಾವರಿ, ಕೆರೆ ತುಂಬುವ ಯೋಜನೆಗಳನ್ನು ಮತ್ತು ಎನ್ನಾರ್ಬಿಸಿ 5ಎ ಕಾಲುವೆ ಕಾಮಗಾ-ರಿಗಳು ನೆನೆಗುದಿಗೆ ಬಿದ್ದಿವೆ. ಚುನಾವಣೆಯಲ್ಲಿ ಅಸ್ತ್ರವಾಗಿ ಬಳಿಸಿಕೊಂಡು ಅಧಿಕಾರಕ್ಕೆ ಬಂದಿರುವ ಶಾಸಕರು ರೈತರ ಬಗ್ಗೆ ಕಾಳಜಿ ಇದ್ದರೆ. ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ ನೀರು ಹರಿಸಬೇಕು.

-ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್

## ಸಾಹಿತ್ಯ ಸಿಂಚನ

ವಿಶ್ವಕ್ಕೆ ಶಾಂತಿ ನೀಡಿದ ನಾಡು
ನಮ್ಮ ಕನ್ನಡ ನಾಡು
ಇಂದು ಅಶಾಂತಿಯ ಬೀಡು
ಯಾಕ ಹಿಂಗ್ಯಾಕ

ಪರಧರ್ಮ ಸಹಿಷ್ಣತೆಯ ಬೀಡು
ನಮ್ಮ ನಲ್ಮೆಯ ನಾಡು
ಆಗುತ್ತಿದೆಯಲ್ಲ ಕಲ್ಮಶದ ಗೂಡು
ಯಾಕ ಹಿಂಗ್ಯಾಕ

ಹೊನ್ನಿನ ನಾಡು ಗಂಧದ ಬೀಡು
ಪ್ರೀತಿಯ ಕನ್ನಡ ನಾಡು
ದ್ವೇಷ ದಳ್ಳೂರಿಯಲ್ಲಿ ಸಾಗುತಿದೆ
ಯಾಕ ಹಿಂಗ್ಯಾಕ

ದುಡಿಯಲು ಹೋದ ಕನ್ನಡಿಗರು
ತೆಲುಗು,ಮರಾಠಿ,ತಮಿಳು ಕಲಿತರು
ಮಾತೃ ಭಾಷೆ ಕನ್ನಡ ಮರೆತರು
ಯಾಕ ಹಿಂಗ್ಯಾಕ

ಆಂಧ್ರ ತಮಿಳು ಮಹಾರಾಷ್ಟ್ರಗಳಿಂದ
ಬಂದವರು ಆಗಿದ್ದಾರೆ ಇಲ್ಲಿ ಅಧಿಕಾರಿಗಳು
ನಾವಾಗುತ್ತಲಿದ್ದೇವೆ ಭಿಕಾರಿಗಳು
ಯಾಕ? ಹಿಂಗ್ಯಾಕ

ಚಿತ್ರಕಲೆ ಶಿಲ್ಪಕಲೆಯ ತವರೂರು ಹಳೇಬೀಡು
ಗತವೈಭವದ ನಾಡು ಹಂಪಿ
ಹಾಳುಬಿದ್ದು ಆಗಿವೆಯಲ್ಲ ಕೊಂಪಿ
ಯಾಕ ಹಿಂಗ್ಯಾಕ

ಹೆಚ್ಚಿದೆ ಇಂಗ್ಲೀಷ ವ್ಯಾಮೋಹ
ಕುಂದಿದೆ ಕನ್ನಡದ ಮೋಹ
ಆಗುತ್ತಲಿದೆ ಎಲ್ಲೆಡೆ ದ್ರೋಹ
ಯಾಕ ಹಿಂಗ್ಯಾಕ

ಜ್ಞಾನಪೀಠ ಪ್ರಶಸ್ತಿಗಳು
ಲಭಿಸಿದವು ನಮಗೆ ಎಂಟು
ಕನ್ನಡದ ಬಗ್ಗೆ ಪೂರ್ಣವಿಲ್ಲ ನಂಟು

ಬೀರಪ್ಪ ಶಂಭೋಜಿ ಸಿಂಧನೂರು

# ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ತಡೆಯಲು ಸೋಲಿಡಾರಿಟಿ ಯೂತ್ ಮೂವ್ಮೆಂಟ್ ನಿಂದ ತಹಶೀಲ್ದಾರ್ ಅವರಿಗೆ ಮನವಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು:29 ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಸಿಂಧನೂರು ಘಟಕದ ವತಿಯಿಂದ ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ ಹಾಗೂ ಡಿಜಿಟಲ್ ಅಪರಾಧಗಳನ್ನು ತಡೆಯಲು ತುರ್ತು, ಪರಿಣಾಮಕಾರಿ ಮತ್ತು ಕಾನೂನುಬದ್ಧ ಕ್ರಮಗಳನ್ನು ಕೈಗೊಳ್ಳುವಂತೆ ಮನವಿ ಪತ್ರವನ್ನು ತಹಸಿಲ್ದಾರರಿಗೆ ಸಲ್ಲಿಸಲಾಯಿತು. ಅಧ್ಯಕ್ಷರಾದ ಅಬುಲೈಸ್ ನಾಯಕ್ ಅವರ ನೇತೃತ್ವದಲ್ಲಿ ಮನವಿ ಪತ್ರವನ್ನು ಸಲ್ಲಿಸಲಾಯಿತು.**

ಮನವಿ ಸಲ್ಲಿಸುವ ಸಂದರ್ಭ ಜಿಲ್ಲಾಧ್ಯಕ್ಷ ಡಾ. ವಸೀಮ್ ಹಾಗೂ ಸಮಾಜಸೇವಕ ಸಿರಾಜ್ ಭಾಷಾ ಅವರು ಮಾತನಾಡಿ, ಸೈಬರ್ ಅಪರಾಧಗಳ ಗಂಭೀರತೆ ಮತ್ತು ಸರ್ಕಾರ ಕೈಗೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.



ಮನವಿಯಲ್ಲಿ ಉಲ್ಲೇಖಿಸಿದ ಪ್ರಮುಖ ಬೇಡಿಕೆಗಳು: 1) ಚಳಿಗಾಲದ ಅಧಿವೇಶನದಲ್ಲಿ ಚರ್ಚೆ: ಡಿಸೆಂಬರ್ 8 ರಿಂದ ಪ್ರಾರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಸೈಬರ್ ವಂಚನೆ ವಿಚಾರವನ್ನು ಆದ್ಯತೆಯಿಂದ ಚರ್ಚಿಸಿ ಕಠಿಣ ಕ್ರಮ ಕೈಗೊಳ್ಳಬೇಕು. 2)ಜನರ ಆರ್ಥಿಕ ಭದ್ರತೆ: ಸೈಬರ್ ವಂಚನೆಯ ಪರಿಣಾಮವಾಗಿ ಜನರು ತಮ್ಮ ಕಷ್ಟಪಟ್ಟು ಕೂಡಿಟ್ಟ ಹಣ ಕಳೆದುಕೊಂಡು ಭಯಭೀತರಾಗುತ್ತಿದ್ದಾರೆ. ಕೆಲವರು ಆತ್ಮಹತ್ಯೆಗೆ ಸಹ ಶರಣಾಗುತ್ತಿರುವುದು ಆತಂಕಕಾರಿ. ಸರ್ಕಾರ ಜನರ ಭದ್ರತೆಯನ್ನು ಖಚಿತಪಡಿಸುವ ಬಲವಾದ ರಕ್ಷಣಾ ಕ್ರಮಗಳನ್ನು ಜಾರಿಗೆ ತರಬೇಕು. 3)ಜಾಗೃತಿ ಅಭಿಯಾನ: ಸಾಮಾಜಿಕ ಜಾಲತಾಣ ಹ್ಯಾಕಿಂ-ಗ್ ತಡೆಯಲು ಯುವಕರು ಹಾಗೂ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಬಲಪಡಿಸಬೇಕು. 4)ಶಿಫಾರಸುಗಳ ಅನುಷ್ಠಾನ: ಸೋಲಿಡಾರಿಟಿ ಯೂತ್ ಮೂವ್ಮೆಂಟ್ ನೀಡಿರುವ ತಾಂತ್ರಿಕ ಸಲಹೆಗಳು ಮತ್ತು ಶಿಫಾರಸುಗಳನ್ನು ಸರ್ಕಾರ ತಕ್ಷಣ ಪರಿಗಣಿಸಿ ಜಾರಿಗೆ ತರಬೇಕು. ಕಾರ್ಯಕ್ರಮದಲ್ಲಿ ಬಸವರಾಜ್ ಬಾದರ್ಲಿ, ಸೊಹೈಲ್ ದೇಸಾಯಿ, ಇಸ್ಮಾಯಿಲ್ ಸಾಬ್, ನೈಮ್ ಇರ್ಫಾನ್, ಸೈಯದ್ ಅಝರ್ ಉದ್ದಿನ್, ಉಮರ್, ಖಾಜಾ, ಫಾರೂಕ್, ಮೋಷ, ವಾಜಿದ್, ರಿಯಾಜ್, ಅನ್ವರ್ ಸಾಬ್ ಸೇರಿದಂತೆ ಅನೇಕ ಪದಾಧಿಕಾ-ರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು. ತಹಸಿಲ್ದಾರರು ಮನವಿಯನ್ನು ಸ್ವೀಕರಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

# ನಿಮ್ಮ ನೆರೆಹೊರೆಯವರ ಜೊತೆ ಅವರು ಯಾವುದೇ ಜಾತಿಯವರಾಗಲಿ ಉತ್ತಮ ಸಂಬಂಧ ಇರಿಸಿ :ಬಾಬರ್ ಪಾಷಾ




**ನೈಜ್ಯ ದೆಸೆ ನ್ಯೂಸ್**

**ಜಮಾತೆ ಇಸ್ಲಾಮಿ ಹಿಂದ್ ಸಿಂಧನೂರು ವತಿಯಿಂದ ಮಸ್ ಜಿದೇ ಹುದಾ ಸಭಾಂಗಣದಲ್ಲಿ ಸದ್ಭಾವ ಸಂಗಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ನವೆಂಬರ್ 21 ರಿಂದ 30 ರ ವರೆಗೆ ರಾಷ್ಟ್ರವ್ಯಾಪಿ ನೆರೆಹೊರೆಯವರ ಹಕ್ಕುಗಳು ಮಾದರಿ ನೆರೆಹೊರೆ ,ಮಾದರಿ ಸಮಾಜ ವಿಷಯದಡಿ ಕಾರ್ಯಕ್ರಮ ಆಯೋಜಿಸಿದ ಹಿನ್ನಲೆಯಲ್ಲಿ ಇಂದು ಈ ಕಾರ್ಯಕ್ರಮ ನಡೆಯಿತು.**

ನಮ್ಮ ನೆಚ್ಚಿನ ಸಿನಿಮಾ ತಾರೆಯರು ಕ್ರಿಕೆಟ್ ಆಟಗಾರರು ತೀರಿದಾಗ ನಾವು ದಿನಾಪೂರ್ತಿ ದುಃಖ ಪಡುತ್ತೇವೆ ಶ್ಲೋಕ ವ್ಯಕ್ತಪಡಿಸುತ್ತೇವೆ ಆದರೆ ನಮ್ಮ ನೆರೆಹೊರೆಯ ಮನೆಯವರು ಆಸ್ಪತ್ರೆಗೆ ದಾಖಲಾಗಿರುವ ವಿಷಯ ಇಂದಿನ ನಮ್ಮ ಪೀಳಿಗೆಗೆ ಗೊತ್ತಿರುವುದಿಲ್ಲ ಅವರ ಆರೋಗ್ಯ ವಿಚಾರಿಸಲು ನಾವು ಹೋಗುವುದಿಲ್ಲ ಪಕ್ಕದ ಮನೆಯಲ್ಲಿ ಯಾರಿದ್ದಾರೆ ಎಂಬುದು ಕೂಡ ನಮಗೆ ಗೊತ್ತಿರುವುದಿಲ್ಲ ಅವರ ಹೆಸರು ಗೊತ್ತಿರುವುದಿಲ್ಲ ನಿಮ್ಮ ನೆರೆಹೊರೆಯರ ಬಗ್ಗೆ ಕಾಳಜಿ ವಹಿಸಿರಿ ಅವರು ಯಾವುದೇ ಧವ ರ್ಗದವರಾಗಿರಲಿ,ಜಾತಿಯವರಾಗಿರಲಿ ಅವರ ಕಷ್ಟ ಸುಖಗಳಲ್ಲಿ ಭಾಗವಹಿಸಬೇಕೆಂದು ನಮ್ಮ ಸಂಘಟನೆ ಬಯಸುತ್ತಿದೆ ಎಂದು ಬಾಬರ್ ಬೇಗ್ ಪ್ರಾಸ್ತಾವಿಕವಾಗಿ ಮಾತನಾಡಿದರು.


ಈ ಕಾರ್ಯಕರ್ಮದಲ್ಲಿ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತು ಸಿಂಧನೂರಿನ ಅಧ್ಯಕ್ಷರು ಹೆಚ್. ಎಫ್ ಮಸ್ಕಿ, ಹೆಚ್ ಎನ್ ಬಡಿಗೇರ್, ನಾರಾಯಣ ಬೆಳಗುರ್ಕಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಈ ಕಾರ್ಯಕ್ರಮದಲ್ಲಿ ಸೂಡಾ ಅಧ್ಯಕ್ಷ ಶ್ರೀ ಬಾಬಾಗೌಡ ಬಾದರ್ಲಿ, ಜಮಾ ಅತೆ ಇಸ್ಲಾಮಿ ಹಿಂದ್ ಅಧ್ಯಕ್ಷ ಟಿ ಹುಸೇನ್ ಸಾಬ್, ಬಾಬರ್ ಪಾಷಾ,ಜಿಲಾನಿ ಪಾಷಾ,ಪತ್ರಕರ್ತ ಅಶೋಕ್ ಬೆನ್ನೂರು,ಚಂದ್ರಶೇಖ್,ಮಹಮ್ಮದ್ ಮುಸ್ತಫಾ ಹಾಗೂ ಮುಖಂಡರು ಗಣ್ಯರು ಉಪಸ್ತಿತರಿದ್ದರು.

# ಇಂದು ಕವಿತಾಳ ಪಟ್ಟಣದಲ್ಲಿ ಶ್ರೇಷ್ಠ ಕನಕದಾಸರ ಮೂರ್ತಿ NSB ಅವರಿಂದ ಉದ್ಘಾಟನೆ

**ನೈಜ್ಯ ದೆಸೆ ನ್ಯೂಸ್**

**ಸಂಗೀತದ ಒಬ್ಬ ಪ್ರಮುಖ ಕೊಡುಗೆದಾರರು. ಅವರು ಮೂಲತಃ ದಂಡನಾಯಕರಾಗಿದ್ದು, ಯುದ್ಧದಲ್ಲಿ ಗಾಯಗೊಂಡ ನಂತರ ವೈರಾಗ್ಯ ಹೊಂದಿ ಹರಿಭಕ್ತರಾದರು. ಕನಕದಾಸರ ಕೃತಿಗಳಲ್ಲಿ ಭಕ್ತಿ, ತತ್ವಶಾಸ್ತ್ರಗಳ ಜೊತೆಗೆ ಸಾಮಾಜಿ-ಕ ಅಸಮಾನತೆ, ಜಾತಿ ವ್ಯವಸ್ಥೆಯ ವಿರುದ್ಧ ವಿಡಂಬನೆ ಕೂಡ ಇದೆ. ಅವರ ಪ್ರಮುಖ ಕೃತಿಗಳಲ್ಲಿ 'ಮೋಹನತರಂಗಿಣಿ', 'ನಳಚ-ರಿತ್ರೆ', 'ಹರಿಭಕ್ತಿಸಾರ', 'ನರಸಿಂಹ ಸ್ತೋತ್ರ' ಮತ್ತು 'ರಾಮಧ್ಯಾನ ಮಂತ್ರ' ಸೇರಿವೆ.**

ಕನಕದಾಸರ ಜೀವನ ಮತ್ತು ಸಾಧನೆಗಳು ಹುಟ್ಟು ಮತ್ತು ಮೂಲ ಹೆಸರು: ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಅವರು ಸುಮಾರು 1508 ರಲ್ಲಿ ಕರ್ನಾಟಕದ ಕಾಗಿನೆಲೆ ಸಮೀಪದ ಬಾಡ ಗ್ರಾಮದಲ್ಲಿ ಜನಿಸಿದರು.



ವೃತ್ತಿ: ಅವರು ಮೊದಲು ದಂಡನಾಯಕರಾಗಿದ್ದರು. ಯುದ್ಧದಲ್ಲಿ ಆದ ಅನುಭವದ ನಂತರ ವೈರಾಗ್ಯ ಹೊಂದಿ ಭಕ್ತಿಯ ಮಾರ್ಗವನ್ನು ಆರಿಸಿಕೊಂಡರು. ಶಿಕ್ಷಣ: ಬಾಲ್ಯದಲ್ಲಿಯೇ ಅವರು ತರ್ಕ, ವ್ಯಾಕರಣ ಮತ್ತು ಮೀಮಾಂಸಗಳಲ್ಲಿ ಪರಿಣತರಾಗಿದ್ದರು. ಸಾಹಿತ್ಯ ಮತ್ತು ಸಂಗೀತ: ಕೀರ್ತನೆಗಳು, ಸುಳಾದಿಗಳು ಮತ್ತು ಉಗಾಭೋಗಗಳನ್ನು ರಚಿಸಿದರು. ಕೀರ್ತನೆಗಳ ಅಂಕಿತನಾಮ 'ಕಾಗಿನೆಲೆಯ ಆದಿಕೇಶವರಾಯ' ಎಂಬುದಾಗಿದೆ. 'ಮೋಹನತರಂಗಿಣಿ' (ಕೃಷ್ಣನ ಕಥೆ), 'ನಳಚರಿತ್ರೆ', 'ಹರಿಭಕ್ತಿಸಾರ', 'ನರಸಿಂಹ ಸ್ತೋತ್ರ' ಮತ್ತು 'ರಾಮಧ್ಯಾನಚರಿತೆ' ಅವರ ಪ್ರಮುಖ ಕೃತಿಗಳು. ಪುರಂದರದಾಸರೊಂದಿಗೆ ಸೇರಿ ಕರ್ನಾಟಕ ಸಂಗೀತಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಾಮಾಜಿಕ ಕಳಕಳಿ: ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ತೀವ್ರವಾಗಿ ವಿರೋಧಿಸಿದರು. ಸಮಾಜದ ಸ್ಥಿತಿಗತಿಗಳನ್ನು ತಿದ್ದುವ ಪ್ರಯತ್ನ ಮಾಡಿದರು.

ಅವರ ಕೀರ್ತನೆಗಳಲ್ಲಿ ಸಾಮಾಜಿಕ ಬದಲಾವಣೆಯ ಸಂದೇಶಗಳನ್ನು ನೀಡಿದ್ದಾರೆ. ಉಡುಪಿಯ ಕಥೆ: ಉಡುಪಿಯಲ್ಲಿ ದೇವಸ್ಥಾನದ ಪ್ರವೇಶ ಸಿಗದಿದ್ದಾಗ, ದೇವಸ್ಥಾನದ ಹಿಂಬದಿಯಿಂದ ಹಾಡಿದಾಗ, ಶ್ರೀಕೃಷ್ಣನ ವಿಗ್ರಹವು ತಿರುಗಿ ಭಕ್ತರಿಗೆ ದರ್ಶನ ನೀಡಿತು ಎಂಬ ನಂಬಿಕೆಯಿದೆ. ಈ ಕಾರಣ-ಕ್ಕೆ ದೇವಸ್ಥಾನದ ಹಿಂಭಾಗ 'ಕನಕನ ಕಿಂಡಿ' ಎಂಬ ಕಿಟಕಿಯನ್ನು ನಿರ್ಮಿಸಲಾಗಿದೆ. ಸರಕಾರಿ ಆಚರಣೆ: ಕರ್ನಾಟಕ ಸರ್ಕಾರವು 2008 ರಿಂದ ಕನಕದಾಸರ ಜಯಂತಿಯನ್ನು ಅಧಿಕೃತವಾಗಿ ಆಚರಿಸುತ್ತಿದೆ.

## ಅರ್ದೋಗಹರಿ ನಿದ್ರಾ ಸರಿಯಾದ ನಿದ್ರೆ ಅರ್ಧದಷ್ಟು ರೋಗವನ್ನು ಗುಣಪಡಿಸುತ್ತದೆ ಮನೋಜ್ ಕುಮಾರ್ ಪಾಟೀಲ್

**ನೈಜ್ಯ ದೆಸೆ ನ್ಯೂಸ್**

ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಸಿಂಧನೂರು ಕಾಲೇಜಿನ ಉಪನ್ಯಾಸ ಕಾರ್ಯಕ್ರಮದಲ್ಲಿ ಇಂದು ಸನ್ ರೈಸ್ ವಿದ್ಯಾ ಸಂಸ್ಥೆಗೆ ಸಿಂಧನೂ-ರಿನ ಅಮೃತೇಶ್ವರ ಆಯುರ್ವೇದಿಕ್ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾ-ರಿಗಳಾದ ಡಾ.Manoj Kumar Patil (BAMS ,MD. Ayu) ಇವರು ಆಗಮಿಸಿ ಮಧುಮೇಹ (Diabetic Mellitus) ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿ ಹಾಗೂ ನರ್ಸಿಂಗ್ ನ ಮಹತ್ವದ ಕುರಿತು ಮಾತನಾಡಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದರೂ ಹಾಗೂ ಶನಿವಾರದ ವಿಶೇಷ ಉಪನ್ಯಾಸ ಮಾಡಿದರು.






**ನೈಜ್ಯ ದೆಸೆ ನ್ಯೂಸ್**

ಮಾನ್ವಿ: ತಾಲೂಕಿನ ಅಡವಿ ಅಮರೇಶ್ವರ ಮಠದಲ್ಲಿ ನಾಡಿನ ವಿವಿಧ ಮಠಗಳ ಶ್ರೀಗಳ ಸಮ್ಮುಖದಲ್ಲಿ ಕಿರಿಯ ಶ್ರೀಗಳಾದ ಶ್ರೀ ತೋಂಟಾದರ್ಯ ಮಹಾಸ್ವಾಮಿಗಳಿಗೆ ಧರ್ಮ ದಂಡ, ಪೇಟವನ್ನು ಹಸ್ತಾಂತರಿಸಲಾಯಿತು.

# ಗ್ರಾಮೀಣರ ಆಡುಭಾಷೆಯೇ ಜನಪದ: ಗೋವಿಂದರಾಜ ಬಾರಿಕೇರ್

**ನೈಜ್ಯ ದೆಸೆ ನ್ಯೂಸ್**

**ಜನಪದ ನಶಿಸುವುದಿಲ್ಲ ಮತ್ತಷ್ಟು ನವನವೀನವಾಗಿ ಸಾಗುತ್ತಿದೆ. ಅಕ್ಷರ ಬರದವರು, ಬರುವವರು ಜನಪದ ವರ್ಗೀಕರಣ ಮಾಡುವಂತಿಲ್ಲ. ಅಕ್ಷರ ಬಲ್ಲವರಿಗಿಂತ ಅಕ್ಷರ ಬಾರದವರಲ್ಲಿ ಜನಪದ ನಿರಂತರವಾಗಿದೆ. ಗ್ರಾಮೀಣರ ಆಡು ಭಾಷೆಯೇ ಜನಪದ ಎಂದು ಗೋವಿಂದ ರಾಜ ಬಾರಿಕೇರ್ ಉಪನ್ಯಾಸ ನೀಡಿದರು.**

ನಗರದ ಶಂಕರ್ ಟ್ರಸ್ಟ್ ಕಾಲೇಜಿನಲ್ಲಿ ಶನಿವಾರದಂದು ಕರ್ನಾಟಕ ಜಾನಪದ ಪರಿಷತ್ತು ತಾಲೂಕು ಘಟಕ ಸಿಂಧನೂರು ವತಿಯಿಂದ ಕಾಲೇಜಿಗೊಂದು ಜನಪದ ಎಂಬ ವಿಷಯದ ಕುರಿತು ಉಪನ್ಯಾಸ ಹಾಗೂ ಜನಪದ ಗಾದೆಗಳಲ್ಲಿ ಜೀವನಾನಭವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿ-ತ್ತು. ಸುದೀರ್ಘವಾಗಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನ ಅಜೆಯಕುಮಾರ ಗದ್ರಟಗಿ, ಶಂಕರ್ ಟ್ರಸ್ಟ್ ಕಾಲೇಜಿನ ಪ್ರಿನ್ಸಿಪಾಲ್ ಶೇಕ್ಷಾವಲಿ, ವಹಿಸಿದ್ದರು ಕರ್ನಾಟಕ ಜನಪದ ಪರಿಷತ್ತು ತಾಲೂಕು ಅಧ್ಯಕ್ಷರಾದ ಬಸವರಾಜ ನಾಯಕ ಪ್ರಾಸ್ತಾವಿಕವಾಗಿ ನುಡಿಗಳನ್ನು ನುಡಿದರು.



ಈ ವೇಳೆ: ಮಹಿಳಾ ಸಂಚಾಲಕಿ ಗೌರಿ ವಾಲೇಕರ್, ಮಲ್ಲಯ್ಯ ಹಿರೇಮಠ, ಕವಿತಾ ಶರಣಬಸವ ಪಾಟೀಲ್, ಶಿಕ್ಷಕ ಶಿವರಾಜ, ಕಾಲೇಜಿನ ಸಿಬ್ಬಂದಿ ವರ್ಗ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಅದ್ದೂರಿಯಾಗಿ ನಡೆದ ಪದಗ್ರಹಣ ಸಮಾರಂಭ ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವ ಕಾಂಗ್ರೆಸ್ ಪಕ್ಷ: ಅಮರೇಗೌಡ ಪಾಟೀಲ್ ಬಯ್ಯಾಪೂರ

**ನೈಜ್ಯ ದೆಸೆ ನ್ಯೂಸ್**

**ಲಿಂಗಸುಗೂರು: ಬ್ರಿಟಿಷರ ಗುಲಾಮಗಿರಿ, ಕಪಿಮುಷ್ಠಿಯಲ್ಲಿ ಪರತಂತ್ರವಾಗಿದ್ದ ಭಾರತ ದೇಶವನ್ನು ಸ್ವತಂತ್ರಗೊಳಿಸಿ ದೇಶಕ್ಕೆ ಜೀವ ಮತ್ತು ಜೀವನ ಕೊಟ್ಟದ್ದು ಕಾಂಗ್ರೆಸ್ ಪಕ್ಷ ಎಂದು ಮಾಜಿ ಸಚಿವ ಹಾಗೂ ಕೊಪ್ಪಳ ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪೂರ ಹೇಳಿದರು.**

ಲಿಂಗಸುಗೂರು ವಿಧಾನಸಭಾ ಕ್ಷೇತ್ರದ ತಾಲೂಕು ಕಾಂಗ್ರೆಸ್ ಸಮಿತಿಯಿಂದ ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ನಾನಾ ವಿಭಾಗಗಳಿಗೆ ಆಯ್ಕೆಯಾದ ನೂತನ ಪದಾಧಿಕಾ-ರಿಗಳ ಪದಗ್ರಹಣ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು. ಶಿಕ್ಷಣ ತಂತ್ರಜ್ಞಾನ ಕೃಷಿ ಅಭಿವೃದ್ಧಿಗೆ ಒತ್ತು ನೀಡಿದ್ದು ಮಾಜಿ ಪ್ರಧಾನಿ ರಾಜೀವ್‌ಗಾಂಧಿಯವರು. ಯುವಕರು ದೇಶದ ಇತಿಹಾಸ ತಿಳಿದುಕೊಳ್ಳಬೇಕು. ಆಚ-



ೇದಿನ ಆಯೆಂಗೆ ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್ ಎನ್ನುವುದು ಬಿಜೆಪಿಯವರ ಜನರನ್ನು ಪೆದ್ದು ಮಾಡುವ ಮಾತುಗಳು. ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಬಂದಿರುವ ಕಾಂಗ್ರೆಸ್ ಪಕ್ಷ ರಾಜ್ಯ ದೇಶದ ಅಭಿವೃದ್ಧಿಗೆ ಕಾರಣ ಎಂದರು. ವ್ಯಕ್ತಿ ಮುಖ್ಯವಲ್ಲ ಪಕ್ಷ ಮುಖ್ಯ; ನಮಗೆ ವ್ಯಕ್ತಿ ಮುಖ್ಯವಲ್ಲ ಪಕ್ಷ ಮುಖ್ಯ. ಲಿಂಗಸುಗೂರು ಕ್ಷೇತ್ರದಲ್ಲಿ ಬರುವ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವವರನ್ನು ಗೆಲ್ಲಿಸಿ ರಾಜ್ಯದಲ್ಲಿ ಸಿದ್ಧರಾಮಯ್ಯ ಡಿಕೆಶಿಯವರ ಕೈ ಬಲವಡಿಸಲು ನಾವು ಸದಾ ಸನ್ನದ್ಧರಾಗಿರುತ್ತೇವೆ. ಜನಪರ ಆಡಳಿತ ನೀಡಿದ ಕಾಂಗ್ರೆಸ್ ಪಕ್ಷದ ಅಭಿವೃದ್ಧಿಪರ ಕಾರ್ಯಗಳನ್ನು ಸಹಿಸದೇ ಬಿಜೆಪಿಯವರು ಹೊಟ್ಟೆ ಕಿಚ್ಚು ಪಡುತ್ತಿದ್ದಾರೆ.

ದೇವರು ಅಧ್ಯಾತ್ಮ ಮನಸ್ಸಿನ ಶಾಂತಿಗಾಗಿ ಮಾಡಬೇಕೆ ಹೊರತು. ಜಾತಿಗಳ ಮಧ್ಯೆ ಸಂಘರ್ಷ ಹಚ್ಚಿ ಅದರಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಕೆಲಸ ಬಿಜೆಪಿಯವರು ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ 11 ವರ್ಷಗಳಲ್ಲಿ ಒಂದು ಡ್ಯಾಂ ಕಟ್ಟಿಲ್ಲ. ರೈತರಿಗೆ ಅನುಕೂಲ ಆಗುವ ಜನಸಾಮಾನ್ಯರ ಜೀವನ ಮಟ್ಟ ಸುಧಾರಣೆ ಮಾಡುವ ನಿಟ್ಟಿನಲ್ಲಿ ಕೆಲಸಗಳು ಆಗಿಲ್ಲ. ಎಂದು ಕೇಂದ್ರ ಸರಕಾರದ ಕಾರ್ಯವೈಖರಿಗಳನ್ನು ಟೀಕಿಸಿದರು. ಪ್ರಾಸ್ತಾವಿಕವಾಗಿ ಜಿಲ್ಲಾ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಪಾಮಯ್ಯ ಮುರಾರಿ ಮಾತನಾಡಿ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿ ಸಾಕಷ್ಟು ಬಡ ಜನರಿಗೆ ಅನುಕೂಲ ಮಾಡಿ ಕೊಡಲಾಗುತ್ತದೆ, ಗ್ರಾಮೀಣ ಜನರಿಗೆ ಹಾಗೂ ಬಡ ಮಹಿಳೆಯರಿಗೆ ಕಾಂಗ್ರೆಸ್ ಪಕ್ಷ ಯೋಜನೆ ಜಾರಿಗೆ ತಂದಿದೆ, ಬಿಜೆಪಿ ಸುಳ್ಳು ಪ್ರಚಾರ ಮಾಡುತ್ತದೆ ಅದನ್ನು ನಮ್ಮ ಕಾರ್ಯಕರ್ತರು ಹೆದೆಗುದ್ದದೆ ಪಕ್ಷವು ಬೆಳಸಬೇಕು ಎಂದರು. ಸಣ್ಣ ಸಣ್ಣ ಕಾರ್ಯಕರ್ತರಿಗೆ ಕಾಂಗ್ರೆಸ್ ಪಕ್ಷ ಅವರನ್ನು ಗುರುತಿಸಿ ಅವರಿಗೆ ಸ್ಥಾನಮಾನ ಕೊಟ್ಟಿದೆ, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಅವರು ಬಡ ಜನರ ಚಿಂತಕರು, ನೀರಾವರಿ ಹರಿಕಾರರು ಎಂದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಜಿಲಾಧ್ಯಕ್ಷ ಮುರಳಿ ಯಾದವ್, ರಾಜ್ಯ ಯೋಜನಾ ಆಯೋಗದ ಸದಸ್ಯ ರಜಾಕ್ ಉಸ್ತಾದ್, ಎಸ್‌ಟಿ ವಿಭಾಗದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ನಾಯಕ, ಮುಖಂಡರಾದ ಗುಂಡಪ್ಪ ನಾಯಕ, ಅನಿಸ್ ಪಾಷಾ, ಅದಪ್ಪ ಮನಗೂಳಿ. ಸೋಮಶೇಖರ ಐದನಾಳ, ಜಗದಿ ನಗೌಡ, ಪ್ರಕಾಶ ಕುರಿ, ಶಶಿಧರ ಪಾಟೀಲ್, ಲಾಲಪ್ಪ ರಾಠೋಡ್, ಚೆನ್ನಾರೆಡ್ಡಿ ಬಿರಾದಾರ, ಮಲ್ಲಯ್ಯ ಸೇರಿ ಇತರರಿದ್ದರು.

## ನೇಮಕಾತಿ ಪ್ರಕಟಣೆ

**AIIMS ನೇಮಕಾತಿ 2025: 1383 ಹಿರಿಯ ನರ್ಸಿಂಗ್ ಅಧಿಕಾರಿ, ಚಾಲಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯು ನವೆಂಬರ್ 2025 ರ AIIMS ಅಧಿಕೃತ ಅಧಿಸೂಚನೆಯ ಮೂಲಕ ಹಿರಿಯ ನರ್ಸಿಂಗ್ ಅಧಿಕಾರಿ, ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 02-ಡಿಸೆಂಬರ್-2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಏಮ್ಸ್ ನೇಮಕಾತಿ ಸಂಸ್ಥೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಪೋಸ್ಟ್ ಹೆಸರು ಹಿರಿಯ ನರ್ಸಿಂಗ್ ಅಧಿಕಾರಿ, ಚಾಲಕ 1383 ಹುದ್ದೆಗಳ ಸಂಖ್ಯೆ ಅರ್ಹತೆ 10ನೇ ತರಗತಿ, ಐಟಿಐ, 12ನೇ ತರಗತಿ, ಡಿಪ್ಲೊಮಾ, ಬಿ.ಫಾರ್ಮ್, ಪದವಿ, ಬಿಎಸ್ಸಿ, ಬಿಇ/ ಬಿ.ಟೆಕ್, ಬಿ.ವಿ.ಎಸ್ಸಿ, ಪದವಿ, ಎಂಬಿಬಿಎಸ್, ಸ್ನಾತಕೋತ್ತರ ಪದವಿ, ಪಿಜಿ ಪದವಿ/ ಡಿಪ್ಲೊಮಾ, ಎಂ.ಎಸ್ಸಿ, ಎಂಎ, ಎಂ-ಎಸ್ಡಬ್ಲ್ಯೂ, ಪಿಎಚ್ಡಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02-ಡಿಸೆಂಬರ್-2025 https://aiimsexams.ac.in/ ?Official Website: aiimsexams.ac.in ಕೊನೆಯ ದಿನಾಂಕ: 02-ಡಿಸೆಂಬರ್-2025**

## ಮಾನ್ವಿ ತಾಲೂಕ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ಶಿಕ್ಷಕರ ದಿನಾಚರಣೆ

**ನೈಜ್ಯ ದೆಸೆ ನ್ಯೂಸ್**

**ಬಂಗಾರದ ಮನುಷ್ಯ ಎಂದೇ ಖ್ಯಾತಿ ಪಡೆದ ಶಾಸಕ ಹಂಪಯ್ಯ ನಾಯಕ್ ರವರಿಂದ ಬಂಗಾರದ ಪದಕವನ್ನು ನೀಡಿ ಶಿಕ್ಷಕರಿಗೆ ಸನ್ಮಾನ... ಮಾನ್ವಿ ನಗರದಲ್ಲಿ ಈ ದಿನ ಈದ್ಗಾ ಶಾದಿ ಮಹೆಲಿ ನಲ್ಲಿ ಮನವಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಯವರು ಹಮ್ಮಿಕೊಂಡಿರುವ ಶಿಕ್ಷಕರ ದಿನಾಚರಣೆಯನ್ನು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕರು ಮತ್ತು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್ ಎಸ್ ಬೋಸುರಾಜ ರವರು ಶಾಸಕರಾದ ಹಂಪಯ್ಯ ನಾಯಕ್ ಅವರು ಹಾಗೂ ಮಾಜಿ ಶಾಸಕರಾದ ವೆಂಕಟಪ್ಪ ನಾಯಕ್ ರವರು ಹಾಗೂ ಅತಿಥಿಗಳು ರಾಧಾಕೃಷ ರವರ ಫೋಟೋಗೆ ಮಾಲಾರ್ಪಣೆ ಮಾಡಿ ಜ್ಯೋತಿ ಬೆಳಗಿನ ಸೋದರ ಮೂಲಕ ಉದ್ಘಾಟನೆ ಮಾಡಿದರು.**

ನಂತರ ಉದ್ಘಾಟನಾ ನುಡಿಯನ್ನು ಮಾಡಿದ ಎನ್ ಎಸ್ ಬೋಸರಾಜ್ ಸಚಿವರು ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣಕ್ಕೆ ನಮ್ಮ ಸರ್ಕಾರವು ವಾರ್ಷಿಕ 5,000 ಕೋಟಿ ರೂಪಾಯಿಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣದಲ್ಲಿ 1125 ಕೋಟಿ ರೂಪಾಯಿಗಳು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಟ್ಟು ಶೇಕಡ 25 ರಷ್ಟು ಹಣವನ್ನು ಮೀಸಲಾಡುವುದರ ಮುಖಾಂತರ



ನಮ್ಮ ಭಾಗಕ್ಕೆ ಹೆಚ್ಚಿನ ಶಿಕ್ಷಣದಲ್ಲಿ ಕ್ಷೇತ್ರದಲ್ಲಿ ನಮ್ಮ ಭಾಗವು ಸಹ ಮುಂದುವರೆಯಲಿ ಎಂಬ ಉದ್ದೇಶ ನಮ್ಮ ಸರ್ಕಾರದ್ದು. ನಾನು ಶಾಸಕನಾಗಿ ಆಯ್ಕೆಯಾದ ಎರಡನೇ ವರ್ಷದ ಅವಧಿಯಿಂದ ಪ್ರಾರಂಭವಾದ ಶಿಕ್ಷಕರಿಗೆ ಬಂಗಾರದ ಬದುಕ ನೀಡುವುದು ಕಾರ್ಯಕ್ರಮವು ಮುಂದುವರಿಸುತ್ತಾ ಹೋಗುತ್ತಾ ಇರುವುದು ಅದೇ ರೀತಿ ನಮ್ಮ ಶಾಸಕರಾದ ಜಿ ಹಂಪಯ್ಯ ನಾಯಕ ಅವರು ಮುಂದಿನ ಶೈಕ್ಷಣಿಕ ವರ್ಷದಿಂದ ಐದು ಗ್ರಾಂ ಇದ್ದ ಚಿನ್ನವನ್ನು ಎಂಟು ಗ್ರಾಮಿಗೆ ಏರಿಸುವುದರ ಮೂಲಕ ನಮ್ಮ ವಿಧಾನಸಭಾ ಕ್ಷೇತ್ರದ ಶಿಕ್ಷಕ ಶಿಕ್ಷಕರಿಗೆ ಶಿಕ್ಷಣದ ಜವಾಬ್ದಾರಿ ನಿಮ್ಮ ಮೇಲಿನ ಹೆಚ್ಚಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರು ಮಾತನಾಡಿ ನನ್ನ ರಾಜಕೀಯ ಗುರುಗಳ ಮಾರ್ಗದರ್ಶನದಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಶಿಕ್ಷಣಕ್ಕೆ ಹೆಚ್ಚಿನ ವತ್ತು ನೀಡುತ್ತಿದ್ದು ಶಾಲಾ ಕಟ್ಟಡಗಳು ವಸತಿ ನಿಲಯಗಳು ಮುರಾರ್ಜಿ ದೇಸಾಯಿ ಶಾಲೆಗಳನ್ನು ತರುವುದರ ಮೂಲಕ ತಾಲೂಕಿನ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದು ನನಗೆ ಸಂತೋಷ ತಂದಿದೆ ಎಂದರು. ತಾವು ಸಹ ತಮ್ಮ ಜವಾಬ್ದಾರಿಯನ್ನು ಅಷ್ಟೇ ಪ್ರಮಾಣ ಪತಿಯಿಂದ ನಿಭಾಯಿಸಿ ನಮ್ಮ ತಾಲೂಕಿನ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸಾಧನೆಯು ತಮ್ಮ ಸಹಕಾರ ಅತ್ಯಗತ್ಯ ಎಂದರು. ನಂತರ ಆದ-ರ್ಶ ಶಿಕ್ಷಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ನಂತರ ಮಾನ್ವಿಯ ಜನಪ್ರಿಯ ಶಾಸಕರಾದ "ಬಂಗಾರದ ಮನುಷ್ಯ" ಎಂದೇ ಖ್ಯಾತಿ ಪಡೆದ ಹಂಪಯ್ಯ ನಾಯಕ್ ರವರು ಪ್ರತಿ ವರ್ಷದಂತೆ ನಾಲ್ಕು ಜನ ಆದರ್ಶ ಶಿಕ್ಷಕ-ರಿಗೆ ಬಂಗಾರದ ಪದಕವನ್ನು ನೀಡಿದರು.. ಪ್ರಸ್ತುತ ವರ್ಷ ಚೌಡೇಶ್ವರಿ ಶಾಲೆ ಮಾನ್ವಿ ಶಿಕ್ಷಕಿ ಸುವರ್ಣ., ಮಾಂಟೇಸರಿ ಶಾಲೆ ಮಾನ್ವಿ ಶಿಕ್ಷಕ ಟಿ.ಆರ್ .ಪ್ರಕಾಶ್, ಜ್ಞಾನಭಾರತಿ ಶಾಲೆ ಪೋತ್ನಾಳ್ ಶಿಕ್ಷಕಿ ಶ್ರೀಮತಿ ಗಿರಿಜಾ , ವಿದ್ಯಾನಿಧಿ ಶಾಲೆ ಕುರ್ಡಿಯ ಶಿಕ್ಷಕಿ ಶಿಲ್ಪ- ಈ ವರ್ಷ ನಾಲ್ಕು ಜನ ಶಿಕ್ಷಕರಿಗೆ ಬಂಗಾರದ ಪದವನ್ನು ನೀಡಿ ಗೌರವಿಸಲಾಯಿತು... ಈ ಕಾರ್ಯಕ್ರಮದಲ್ಲಿ ಮಾನ್ವಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ಶರ್ಫುದ್ದೀನ್ ಪಾತ್ನಾಳ, ಮನೋಜ್ ಕುಮಾರ್ ಮಿಶ್ರಾ, ಎಂಎಚ್ ಮುಖೀಮ್, ಶೇಕ್ ಫರೀದ್ ಸೈಯದ್ ಅಹಮದ್ ಹುಸೇನಿ ಮತವಾಲೆ, ರಾಜು ತಾಳಿಕೋಟಿ,

ಯೋಜನಾ ಹಾಗೂ ಬ್ಲಾಕ್ ಕಾಂಗ್ರೆಸ್ ನ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಬ್, ಮಾಜಿ ಶಾಸಕರಾದ, ಮುಖಂಡರಾದ ಅಕ್ಬರ್ ಸಾಬ್, ರಾಜಾ ವೆಂಕಟಪ್ಪ ನಾಯಕ್,ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ಸೈಯದ್ ಖಾಲಿದ್ ಖಾದ್ರಿ, ಬಾಲ ಸ್ವಾಮಿ ಕೊಡಲಿ, ಬಸವರಾಜ್ ಪಾಟೀಲ್ ಅಥನೂರ್, ರೌಡ್ರು ಮಹಾಂತೇಶ್ ಸ್ವಾಮಿ,ಅಮರೇಗೌಡ ಹಂಚಿನಾಳ, ರಾಜ ಸುಭಾಷ್ ಚಂದ್ರ ನಾಯಕ್, , ,ಲಕ್ಷ್ಮಿ ದೇವಿ ನಾಯಕ್, ತಾಲೂಕ ದಂಡಾಧಿಕಾ-ರಿಗಳಾದ ಭೀಮರಾಯ ರಾಮಸಮುದ್ರ,ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರು ಶಿಕ್ಷಕ ಶಿಕ್ಷಕಿಯರು ಉಪಸ್ಥಿತರಿದ್ದರು.

## ರಾಯಚೂರು: ಬೆಳೆಹಾನಿಯಾದ ರೈತರಿಗೆ ಪರಿಹಾರ ಪಾವತಿಗೆ ಕ್ರಮ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ನವೆಂಬರ್ 29 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯ ಬೆಳೆ ಹಾನಿಯಾದ ಒಟ್ಟು 76,942 ರೈತ ಫಲಾನುಭವಿಗಳಿಗೆ ನೇರವಾಗಿ ಡಿಬಿಟಿ ಮುಖಾಂತರ ರೂ.34,36,13,754 ಗಳು ಜೊತೆಗೆ ಹೆಚ್ಚುವರಿಯಾಗಿ ರೂ. 33,01.97,441 ಗಳನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಡಿಬಿಟಿ ಮುಖಾಂತರ ಪಾವತಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸಿರುತ್ತದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ತಿಳಿಸಿದ್ದಾರೆ.**

2025-26ನೇ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಪ್ರಕೃತಿ ವಿಕೋಪಗಳಿಂದ ಉಂಟಾದ ಬೆಳೆ ಹಾನಿ ಪ್ರಕರಣದ ಬ್ಯಾಚ-1ನೇಯ ಪರಿಹಾರವನ್ನು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ರೈತರಿಗೆ ಪಾವತಿಸುವ ಬಗ್ಗೆ ರಾಜ್ಯ ಸರ್ಕಾರ ನಿರ್ದೇಶಿಸಿದಂತ ಜಿಲ್ಲೆಯ ಬೆಳೆ ಹಾನಿಯಾದ ಒಟ್ಟು 76,942 ರೈತ ಫಲಾನುಭವಿಗಳಿಗೆ ನೇರವಾಗಿ ಡಿಬಿಟಿ ಮುಖಾಂತರ ರೂ. 34,36,13,754 ಪಾವತಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸಿರುತ್ತದೆ. ಮುಂದುವರೆದು, ದಿನಾಂಕ 25-11-2025ರ ಸರ್ಕಾರದ ಆದೇಶದಂತೆ ರಾಜ್ಯ ಸರ್ಕಾರದಿಂದ ಘೋಷಿಸಿರುವ ಹೆಚ್ಚುವರಿ ಪರಿಹಾರವನ್ನು ರೈತರಿಗೆ ಪಾವತಿಸುವ ಬಗ್ಗೆ ದಿನಾಂಕ 27-11-2025 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ವಿಡಿಯೋ ಸಂವಾದದ ಮುಖಾಂತರ ಚಾಲನೆ ನೀಡಿದ್ದು, ಅದರಂತೆ ಜಿಲ್ಲೆಯ ಒಟ್ಟು 76,941 ರೈತ ಫಲಾನುಭವಿಗಳಿಗೆ ರೂ. 33,01.97,441 ಗಳನ್ನು ಸಹ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಡಿಬಿಟಿ ಮುಖಾಂತರ ಪಾವತಿಸುವ ಬಗ್ಗೆ ಜಿಲ್ಲಾಡಳಿತವು ಕ್ರಮ ವಹಿಸಿದೆ. ಹೆಚ್ಚುವರಿ ಇನ್ಪುಟ್ ಸಬ್ಸಿಡಿ ದರಗಳು ಮತ್ತು ವಿತರಣೆ: ಬೆಳೆ ಹಾನಿಗೊಳಗಾದ ರೈತರಿಗೆ ನೆರವು ನೀಡುವ ಉದ್ದೇಶದಿಂದ, ರಾಜ್ಯ ಸರ್ಕಾರವು ಇನ್ಪುಟ್ ಸಬ್ಸಿಡಿ ದರಗಳನ್ನು ಗರಿಷ್ಠ 2 ಹೆಕ್ಟರ್ ಸೀಮಿತಗೊಳಿಸಿ ಈ ಮುಂದಿನಂತೆ ಹೆಚ್ಚಿಸಿದೆ. ಮಳೆಯಾಶ್ರಿತ ಬೆಳೆಗಳು: ಹೆಕ್ಟೇರ್ 1ಕ್ಕೆ ರೂ. 8,500 ರಿಂದ ರೂ. 17,000 ಹಾಗೂ ನೀರಾವರಿ ಬೆಳೆಗಳು: ಹೆಕ್ಟೇರ್ 1 ಕ್ಕೆ ರೂ. 17,000 ರಿಂದ ರೂ. 25,500 ಮತ್ತು ಬಹುವಾರ್ಷಿಕ ಬೆಳೆಗಳು: ಹೆಕ್ಟೇರ್ 1 ಕ್ಕೆ ರೂ.22,500 ರಿಂದ ರೂ. 31,000 ಎಂದು ಹೆಚ್ಚುವರಿ ಇನ್ಪುಟ್ ಸಬ್ಸಿಡಿ ದರಗಳು ಮತ್ತು ವಿತರಣೆಗೆ ಕ್ರಮವಹಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಗೊಂಡ ಪಂಚಾಯತಿಗೆ ಜಿಲ್ಲಾ ಉಪಕಾರ್ಯದರ್ಶಿ ಭೇಟಿ



**ನೈಜ್ಯ ದೆಸೆ ನ್ಯೂಸ್**

**ಜಿಲ್ಲಾ ಉಪ ಕಾರ್ಯದರ್ಶಿ ಹಾಲ್ ಸಿದ್ದಪ್ಪ ಪೂಜಾರಿಯವರು ಮಹಾತ್ಮಗಾಂಧಿ ಪುರಸ್ಕಾರಕ್ಕೆ ಆಯ್ಕೆಗೊಂಡ ತಾಲೂಕಿನ ಆರ್.ಎಚ್.ಕ್ಯಾಂಪ್, ಬೂತಲದಿನ್ನಿ. ಹಾಗೂ ಪಗಡದಿನ್ನಿ ಗ್ರಾ.ಪಂ. ಗಳಿಗೆ ಭೇಟಿ ನೀಡಿ, ನೋಂದಾಯಿಸಲಾದ**



**ದಾಖಲೆಗಳ ಪರಿಶೀಲನೆ ಮಾಡಿದರು.**

ಆರ್.ಎಚ್.ಕ್ಯಾಂಪ್ 1 ರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಂಥ-ಾಲಯಕ್ಕೆ ಭೇಟಿ ನೀಡಿ, ಹಾಜರಾತಿ ಪರಿಶೀಲಿಸಿ ಸದಸ್ಯರ ನೋಂದಣಿ ಗಣಕಯಂತ್ರದಲ್ಲಿ ನೋಂದಾಯಿಸಲು ಗ್ರಂಥ ಪಾಲಕರಿಗೆ ಸೂಚಿಸಿ, ಕೂಸಿನ ಮನೆಗೆ ಭೇಟಿ ನೀಡಿ ಮಕ್ಕಳಿಗೆ ವೇಳಾಪಟ್ಟಿ ಪ್ರಕಾರ ಪೌಷ್ಟಿಕ ಆಹಾರ ನೀಡಲು ತಿಳಿಸಿ, ಮುಖ್ಯವಾಗಿ ಸ್ವಚ್ಛತೆಯನ್ನು ಕಾಪಾಡಲು ಕೇರ್ ಟೇಕರ್ ಗಳಿಗೆ ಸಲಹೆ ನೀಡಿದರು. ಆಯುಷ್ಮಾನ್ ಸಮುದಾಯ ಕೇಂದ್ರಕ್ಕೆ ಭೇಟಿ ನೀಡಿ ಸಿಬ್ಬಂದಿಯೊಂದಿಗೆ ಕಾರ್ಯಕಲಾಪದ ಬಗ್ಗೆ ವಿಚಾರಿಸಿ, ಸಿಬ್ಬಂದಿ ವಸತಿ ನಿಲಯದ ಬಗ್ಗೆ ಮಾಹಿತಿ ಪಡೆದು, ಪ್ರಗತಿ ಮುಂದುವರಿಯಲು ತಾಲೂಕು ವೈದ್ಯಾಧಿಕಾರಿ ಅವರ ಗಮನಕ್ಕೆ ತಂದು ಬೇಗ ಪೂರ್ಣಗೊಳಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ: ಸಹಾಯಕ ನಿರ್ದೇಶಕರಾದ ವೆಂಕಪ್ಪ, ಅಮರಗುಂಡಪ್ಪ ಪಂಚಾಯತಿ ಅಧ್ಯಕ್ಷರು ರಹಮದ್ ಪಾಷಾ, ಅಭಿವೃದ್ಧಿ ಅಧಿಕಾರಿ ಮಲ್ಲೇಶಪ್ಪ, ಧನ್ಯ ಪ್ರಭು, ಬಿ.ಎಫ್.ಟಿ ವೀರಕುಮಾರ ಸೇ-ರಿದಂತೆ ಪಂಚಾಯತಿ ಸಿಬ್ಬಂದಿಗಳು ಇದ್ದರು.

## ಸಿಲಿಂಡರ್ ಸ್ಫೋಟ: ಸ್ಥಳಕ್ಕೆ ಶಾಸಕ ಅಪ್ಪಾಜಿ ನಾಡಗೌಡ ಭೇಟಿ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟೆ: ಪಟ್ಟಣದ ಗಣೇಶ ನಗರದಲ್ಲಿರುವ ರವಿ ಸೋಮರೆಡ್ಡಿ ಕೋಳೂರ ಅವರ ಮನೆಯಲ್ಲಿ ಗ್ಯಾಸ್ ಸೋರಿಕೆಯಿಂದಾಗಿ ಸಿಲಿಂಡರ್ ಸ್ಫೋಟಗೊಂಡ ಹಿನ್ನಲೆಯಲ್ಲಿ ಶಾಸಕ ಅಪ್ಪಾಜಿ ನಾಡಗೌಡರು ಸ್ಥಳಕ್ಕೆ ಭೇಟಿ ನೀಡಿದರು. ನವೆಂಬರ್ 27ರಂದು ಸಂಭವಿಸಿದ ಈ ಘಟನೆಯಲ್ಲಿ ಮನೆಯಲ್ಲಿದ್ದ 3.80 ಲಕ್ಷ ನಗದು ಹಣ ಪ್ರಮುಖ ದಾಖಲೆ ಪತ್ರಗಳು ಹಾಗೂ ಇಡೀ ಮನೆ ಕಟ್ಟಡ ಶಿಥಿಲಗೊಂಡಿದ್ದು ಅಂದಾಜು 65 ಲಕ್ಷದಷ್ಟು ಹಾನಿಯಾಗಿದೆ ಎಂದು ಮನೆಯ ಮಾಲೀಕ ಕೋಳೂರ ಶಾಸಕರಿಗೆ ತಿಳಿಸಿದರು.**




ಈ ಸಂದರ್ಭದಲ್ಲಿ ಶಾಸಕ ಅಪ್ಪಾಜಿ ನಾಡಗೌಡರು ಮಾತನಾಡಿ ಘಟನೆ ನಡೆದ ಸಮಯದಲ್ಲಿ ಮನೆಯಲ್ಲಿ ಯಾರೂ ಇಲ್ಲದೇ ಇರುವುದರಿಂದ ಯಾವುದೇ ರೀತಿಯ ಜೀವ ಹಾನಿ ಆಗಿಲ್ಲ, ಇದು ಸಮಾಧಾನದ ವಿಷಯವಾಗಿದೆ ಆದರೆ ಇಂಥಹ ವಿಷಯದಲ್ಲಿ ಸಾರ್ವಜನಿಕರು ಹೆಚ್ಚು ಜಾಗೃತಿ ವಹಿಸಬೇಕು ಎಂದ ಅವರು ಸ್ಫೋಟದಿಂದ ಆಗಿರುವ ಒಟ್ಟು ಹಾನಿಯ ಸಮಗ್ರ ವರದಿಯನ್ನು ತಹಶೀಲ್ದಾರ್ ಅವರಿಂದ ಪಡೆದುಕೊಂಡು ಮುಂದಿನ ಕ್ರಮ ಜರುಗಿಸುತ್ತೇನೆ ಎಂದರು.

ಈ ಸಮಯದಲ್ಲಿ ಮುಖಂಡರಾದ ಪ್ರಭುಗೌಡ ಮದರಕಲ್, ಮುದ್ದೇಬಿಹಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಸಂಗನಗೌಡ ಅಸ್ಕಿ, ಗುರು ಕೊಪ್ಪದ, ಶಾಸಕರ ಆಪ್ತ ಸಹಾಯಕ ಬಾಗೇವಾಡಿ, ಕೊಳೂರ ಕುಟುಂಬದ ಸದಸ್ಯರು ಹಾಗೂ ಬಡಾವಣೆಯ ನಿವಾಸಿಗಳು ಇದ್ದರು.


## ಕಾಂಗ್ರೆಸ್ ಸರಕಾರದ ಕೊಡುಗೆ ಅಪಾರ :ರವಿ ಭೋಸರಾಜು

**ನೈಜ್ಯ ದೆಸೆ ನ್ಯೂಸ್**




ರಾಜ್ಯದಲ್ಲಿ ನಮ್ಮ ಕಾಂಗ್ರೆಸ್ ಸರ್ಕಾರ ಜಾರಿ ಮಾಡಿರುವ ಪಂಚ ಗ್ಯಾರಂಟಿಗಳು ಡಿಂಡಿಮ ಭಾರಿಸುತ್ತಿದೆ. ದೀನದಲಿತರು, ಬಡವರ ಬದುಕಿನ ಹೊಸ ಬೆಳಕಾಗಿದೆ. ಗ್ಯಾರಂಟಿಗಳ ವಿರುದ್ಧ ಮನಬಂದಂತೆ ಮಾತನಾಡುವ ನಾಯಕ-ರಿಗೆ ಇದಕ್ಕಿಂತ ಉತ್ತರಬೇಕೆ.


## ಸಮುದಾಯದ ಬಲವರ್ದನೆಗೆ ನೋಂದಣಿ ಮಾಡಿಸಿ: ಶಾಸಕ ಐಹೊಳೆ

**ನೈಜ್ಯ ದೆಸೆ ನ್ಯೂಸ್**

**ಹುಕ್ಕೇರಿ: ರಾಜ್ಯದಲ್ಲಿ ಒಕ್ಕಲಿಗರ ಸಂಘ, ವೀರಶೈವ ಮಹಾಸಭಾ, ಕುರುಬರ ಸಂಘದ ರೀತಿಯಲ್ಲಿ ನಮ್ಮ ಮಾದರ ಮಹಾಸಭಾ ಕಟ್ಟಲು ತೀರ್ಮಾನಿಸಿದ್ದು, ಪದಾಧಿಕಾರಿಗಳು ಸಮುದಾಯದ ಸದಸ್ಯತ್ವ ನೊಂದಣಿ ಮಾಡಿಸಲು ಮುಂದಾಗಬೇಕು ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿದರು.**

ಹುಕ್ಕೇರಿ ನಗರದ ಬಾಬು ಜಗಜೀನ್ ರಾವ್ ಭವನದಲ್ಲಿ ಕರ್ನಾಟಕ ಮಾದರ ಮಹಾಸಭಾ ವತಿಯಿಂದ ಕರ್ನಾಟಕ ಮಾದರ ಮಹಾಸಭಾದ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಸಮಾಜದ ಏಳ್ಗೆಗಾಗಿ ಸಮಾಜದ ಮಕ್ಕಳ ಭವಿಷ್ಯಕ್ಕಾಗಿ ರಾಜ್ಯದಲ್ಲಿ ಮಹಾಸಭಾ ಅವಶ್ಯಕತೆ ಇದೆ. ಅಲ್ಲದೇ ಸಮುದಾಯದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವುದು ಮಹಾಸಭಾದ ಪ್ರಮುಖ ಉದ್ದೇಶವಾಗಿದೆ. ಸಮುದಾಯದ ಜನರ ಸಂಕಷ್ಟಕ್ಕೆ ಸ್ಪಂದಿಸಲು ನೆರವಾಗುವಂತೆ ದೊಡ್ಡ ಮಟ್ಟದಲ್ಲಿ ಮಹಾಸಭಾವನ್ನು ಕಟ್ಟಲು ನೀವೆಲ್ಲಾ ಮುಂದಾಗಬೇಕು. ನಾವೆಲ್ಲಾರು ಪಕ್ಷಾತೀತವಾಗಿ ಕಟ್ಟಲು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇವೆ ಎಂದು ಅವರು ತಿಳಿಸಿದರು.

ಯರನಾಳದ ಸುಕ್ಷೇತ್ರ ಮಠದ ಬ್ರಹ್ಮಾನಂದ ಮಹಾಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಈ ವೇಳೆ ಅನಂತ್ ಕುಮಾರ್ ಬ್ಯಾಕೋಡ, ರಾಜೇಂದ್ರ ಐಹೊಳೆ, ಸುರೇಶ ಐಹೊಳೆ, ಬಸವರಾಜ ದೊಡ್ಡಮನಿ, ಮಹೇಶ ಹಟ್ಟಿಹೊಳಿ, ಸುನಿತಾ ಐಹೊಳೆ, ಕಾಡೇಶ ಹೊಸಮನಿ, ಕರೇಪ್ಪಾ ಗುಡೆನ್ನವರ್, ಸರಿಕರ್ ಸರ್, ಶಂಕರ ಕಟ್ಟಿಮನಿ, ಶಶಿಕಾಂತ ಹೊನ್ನಳ್ಳಿ , ರವಿ ಈರಗಾರ, ಶಂಕರ್ ಗಂಟಿ, ಬಾಳೇಶ್ ಪೂಜಾರಿ, ಸಿದ್ದಪ್ಪ ಹೊಸಮನಿ, ಬಂಡೆಪ್ಪ ಮಾದರ್, ರಘು ಮಾದರ್, ವಿಠ್ಠಲ್ ಮಾದರ್, ರಾಜು ಐಹೊಳೆ ಹಾಗೂ ಅನೇಕ ಸಮಾಜದ ಮುಖಂಡರು ಹಾಜರಿದ್ದರು.

# ನಂದಿನಿ ಶಿಕ್ಷಣ ಮಹಾವಿದ್ಯಾಲಯ ಪೌರತ್ವ ತರಬೇತಿ ಶಿಬಿರ

**ನೈಜ್ಯ ದೆಸೆ ನ್ಯೂಸ್**

**ಡಾ. ನರಸಿಂಹಲು ನಂದಿನಿ ಸ್ಮಾರಕ ಸಂಸ್ಥೆಯ ಸಂಚಾಲಿತ ನಂದಿನಿ ಶಿಕ್ಷಣಮಹಾವಿದ್ಯಾಲಯ, ರಾಂಪುರ ರಾಯಚೂರುವತಿಯಿಂದ ಆಯೋಜಿಸಲಾಗಿರುವ ಪೌರತ್ವ ತರಬೇತಿ ಶಿಬಿರದ ಎರಡನೇ ದಿನ ವಿಶೇಷ ಉಪನ್ಯಾಸ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಸುದ್ದಿಮೂಲ ದಿನಪತ್ರಿಕೆಯವರದಿಗಾರರಾದ ವೆಂಕಟೇಶ್ ಹೂಗಾರ್ ಅವರುಮಾತನಾಡಿ, "ಶಿಕ್ಷಕರುಮತ್ತು ಪತ್ರಕರ್ತರು ಸಮಾಜದ ಎರಡು ಕಣ್ಣುಗಳು" ಎಂದು ನುಡಿದರು. ಶಿಕ್ಷಣ ಹಾಗೂಮಾಧ್ಯಮಗಳ ನಡುವಿನ ಅವಿನಾಭಾವ ಸಂಬಂಧವನ್ನು-ವಿವರಿಸಿದ ಅವರು, "ಶಿಕ್ಷಣ ಪಡೆದ ವರುಮಾತನಾಡಬೇಕು.**

ಮಾಧ್ಯಮಗ 'ಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ಮಾಧ್ಯಮಗಳು ಜನತೆಮತ್ತು ಸರ್ಕಾರದ ನಡುವಿನ ಪ್ರಮುಖ ಕೊಂಡಿ. ವೈಯಕ್ತಿಕ ಸ್ವಾರಸ್ಯಕ್ಕೆಮಾಧ್ಯಮವನ್ನು ಬಳಸಬಾರದು,




ವಾಸ್ತವಿಕತೆಯ ನೆಲೆಯಲ್ಲೇವರದಿಮಾಡಬೇಕು" ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಶಿಕ್ಷಣ ಕ್ಷೇತ್ರದಮೂಲ ಸವ ಎಸ್ಯೆಗಳನ್ನು ಮಾಧ್ಯಮಗಳಮೂಲಕ ಸರ್ಕಾರದ ಗಮನಕ್ಕೆ ತರಲು ಸಾಧ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. "ಗೆದ್ದವರ ಬಗ್ಗೆಮಾತ್ರವಲ್ಲ, ಸೋತವರ ಪ್ರಯತ್ನಗಳನ್ನೂ ಓದಬೇಕು" ವಿದ್ಯಾರ್ಥಿಗೂವರ್ಷದ ರೂ. 1 ಲಕ್ಷ 22 ಸಾವಿರ ವೆಚ್ಚಮಾಡುತ್ತಿರುವುದರಿಂದ ಶಿಕ್ಷಕರು ಬೋಧನೆ ಮಾಡಬೇಕು ಜವಾಬ್ದಾ-ರಿಯಿಂದ ಎಂದುಮನದಟ್ಟುಮಾಡಿದರು. "ವ್ಯವಸ್ಥೆಯನ್ನು ದೂರುವುದಕ್ಕಿಂತ ನಾವು ನಮ್ಮನ್ನು ಸರಿಪಡಿಸಿಕೊಳ್ಳಬೇಕು, ಶಿಕ್ಷಕರು ವಿದ್ಯಾರ್ಥಿಯ ಭವಿಷ್ಯ ರೂಪಿಸಿದರೆ ಪತ್ರಕರ್ತರು ಸಮಾಜದ ಭವಿಷ್ಯ ರೂಪಿಸುತ್ತಾರೆ" ಎಂದು ಹೇಳಿದರು. ಕಾರ್ಯಕ್ರಮಕ್ಕೆ ಅಧ್ಯಕ್ಷತೆವಹಿಸಿದ ಆಡಳಿತಾಧಿಕಾರಿ ನರಸಣ್ಣ ಅವರು, "ಆಹಂಕಾರ ಬಂದರೆ ಗುರಿಮುಟ್ಟಲು ಸಾಧ್ಯವಿಲ್ಲ, ಪತ್ರಕರ್ತರು ಧೈರ್ಯದ ಜೊತೆ ನೈಜವರದಿಗಳನ್ನು ಮಾಡಬೇಕು. ಶಾಸನಾಂಗ, ಕಾರ್ಯಾಂಗ, ನ್ಯಾಯಾಂಗಗಳಂತೆ ಮಾಧ್ಯಮವೂ ನಾಲ್ಕನೇ ಅಂಗಪವಿತ್ರ ಕ್ಷೇತ್ರ" ಎಂದು ಶ್ಲಾಘಿಸಿದರು. ಯುವಕರು ಜರ್ನಲಿಸಂ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗದ ಅವಕಾಶಗಳನ್ನು ಹುಡುಕಬೇಕು ಎಂದು ಸಲಹೆ ನೀಡಿದ ಅವರು, ಕೆಲವುಮಾಧ್ಯಮಗಳು ಬ್ಲಾಕ್‌ಮೇಲ್ ಎಂದು ತಿಳಿಸಿದರು.

ಸರ್ಕಾರವು ಪ್ರತಿ ಮಾಡುವ ದುರುದ್ದೇಶದಿಂದವರ ಕೆ ನಂದಿನಿ ಶಿಕ್ಷಣ ಮಹಾವಿದ್ಯಾಲಯ ಪೌರತ್ವ ತರಬೇತಿ ಶಿಬಿರ ಖಂಡಿಸಿದರು. ದಿಮಾಡುವುದನ್ನು "ಪತ್ರಿಕಾಮಾಧ್ಯಮವು ಸರ್ಕಾರವನ್ನು ರಚಿಸಬಹುದು: ಸರ್ಕಾರವನ್ನು ಬೀಳಿಸಬಹುದು ಕೂಡ" ಎಂದು ಉದಾಹರಣೆಗಳೊಂದಿಗೆ ತಿಳಿಸಿದರು. ವೇದಿಕೆಯಲ್ಲಿ ಪ್ರಾಚಾರ್ಯರಾದ ಡಾ. ಆಲಿಸ್ ಜೋಸೆಫ್ ಉಪಸ್ಥಿತರಿದ್ದರು. ಆರಂಭದಲ್ಲಿ ಶರಣಬಸವ ಪ್ರಾಥ-ರ್ನೆ ಸಲ್ಲಿಸಿದರು, ಕವಿತಾ ಕಾರ್ಯಕ್ರಮ ಶಾಹಿದ್ ಸ್ವಾಗತ ಭಾಷಣಮಾಡಿದರು. ನಂತರ ಪ್ರಶಿಕ್ಷಣಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರೂಪಿಸಿದರು, ನಡೆಸಿದರು.

ನಾಡಗೀತೆಯಿಂದ ಶಿಬಿರವು ಪ್ರಾರಂಭವಾಗಿ ರಾಷ್ಟ್ರಗೀತೆಯೊಂದಿಗೆಮುಕ್ತಾಯವಾಯಿತು. ಬೆಳಿಗ್ಗೆಯ ಅಧಿವೇಶನದಲ್ಲಿ ಧ್ವಜಾರೋಹಣ, ಲಘು ವ್ಯಾಯಾಮಮತ್ತು ಶ್ರಮದಾನ ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮದಲ್ಲಿ ಉಪ ಪ್ರಾಚಾರ್ಯ ಡಾ. ವಿಜಯ್ ರಾಜೇಂದ್ರ, ಸಹಾಯಕ ಪ್ರಾಧ್ಯಾಪಕರು ಶ್ರೀಮತಿ ಪರಿಮಳ, ನರಸಿಂಹ ಹೊಸೂರು, ಆಮರಾನಂದ, ಈರಪ್ಪ ಉಪ್ಪಲದಿನ್ನಿ ಹಾಗೂ

# ಶಿಕ್ಷಣ ಮಾರ್ಗದರ್ಶಿ ವಿಶೇಷ

## MS ಓಟೋರೈನೊಲ್ಯಾರಿಂಗಾಲಜಿ

(ENT) MS ಓಟೋರೈನೊಲ್ಯಾರಿಂಗಾಲಜಿ (ENT) ಎಂಬುದು 3 ವರ್ಷದ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಆಗಿದ್ದು, ಕಿವಿ, ಮೂಗು, ಗಂಟಲು ಹಾಗೂ ತಲಾ-ಗಂಡದ ಸಮಸ್ಯೆಗಳ ನಿರ್ಧಾರ ಮತ್ತು ಚಿಕಿತ್ಸೆಗೆ ಕೇಂದ್ರೀಕರಿಸಿದೆ. ಅರ್ಹತೆ ಪಡೆಯಲು ನೀವು ಅಗತ್ಯ ಅಂಕಗಳೊಂದಿಗೆ MBBS ಪದವಿ ಹೊಂದಿರಬೇಕು ಹಾಗೂ 1 ವರ್ಷದ ಇಂಟರ್ನ್ಶಿಪ್ ಪೂರ್ಣಗೊಳಿಸಿರಬೇಕು. ಪ್ರವೇಶವು ನಿಮ್ಮ NEET-PG ರ್ಯಾಂಕ್ ಮತ್ತು ಕೌನ್ಸೆಲಿಂಗ್ ಪ್ರಕ್ರಿಯೆಯ ಮೇಲೆ ಅವಲಂಬಿತವಾಗಿರುತ್ತದೆ. ಈ ಕೋರ್ಸ್ನಲ್ಲಿ ಸೈದ್ಧಾಂತಿಕ ಅಧ್ಯಯನದ ಜೊತೆಗೆ ಪ್ರಾಯೋಗಿಕ ಶಸ್ತ್ರಚಿಕಿತ್ಸಾ ತರಬೇತಿಯೂ ಒಳಗೊಂಡಿರುತ್ತದೆ. ಕಿವಿ, ಮೂಗು, ಗಂಟಲು ಸಂಬಂಧಿತ ವ್ಯಾಧಿಗಳ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ಚಿಕಿತ್ಸೆ, ಜಟಿಲ ENT ಹಾಗೂ ತಲಾ-ಗಂಡದ ಸಮಸ್ಯೆಗಳ ನಿರ್ವಹಣೆ ಕಿವಿ, ಮೂಗು, ಗಂಟಲು ಸಂಬಂಧಿತ ವ್ಯಾಧಿಗಳ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ಚಿಕಿತ್ಸೆ, ಜಟಿಲ ENT ಹಾಗೂ ತಲಾ-ಗಂಡದ ಸಮಸ್ಯೆಗಳ ನಿರ್ವಹಣೆ ಸೈದ್ಧಾಂತಿಕ ವಿಷಯಗಳ ಜೊತೆಗೆ ಪ್ರಾಯೋಗಿಕ, ಕೈಯಿಂದ ಮಾಡುವ ಶಸ್ತ್ರಚಿಕಿತ್ಸಾ ತರಬೇತಿ. ENT ಕಾಯಿಲೆಗಳ ಆಳವಾದ ಜ್ಞಾನ ,ಕಿವಿ, ಮೂಗು, ಗಂಟಲುಗಳಿಗೆ ಸಂಬಂಧಿಸಿದ ಶಸ್ತ್ರಚಿಕಿತ್ಸಾ ವಿಧಾನಗಳು, ಒಟಾಲಜಿ (ಕಿವಿ), ನೆಯುರೋ-ಒಟಾಲಜಿ, ಪೀಡಿಯಾಟ್ರಿಕ್ ಓಟೋರೈನೊಲ್ಯಾರಿಂಗಾಲಜಿ ಮೊದಲಾದ ವಿಶೇಷ ವಿಭಾಗಗಳು ಅವಧಿ: 3 ವರ್ಷ ಪದವಿ: MBBS ಪದವಿ ಇಂಟರ್ನ್ಶಿಪ್: 1 ವರ್ಷದ ಇಂಟರ್ನ್ಶಿಪ್ ಪೂರ್ಣಗೊಳಿಸಿರಬೇಕು ಪ್ರವೇಶ ಪರೀಕ್ಷೆ: ಅಗತ್ಯ ಅಂಕಗಳೊಂದಿಗೆ NEET-PG ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ವೃತ್ತಿ ಅವಕಾಶಗಳು ಕ್ಲೀನಿಕಲ್ ಪ್ರಾಕ್ಟೀಸ್: ಆಸ್ಪತ್ರೆಗಳು ಮತ್ತು ಕ್ಲಿನಿಕ್ಗಳಲ್ಲಿ ENT ತಜ್ಞರಾಗಿ ಕೆಲಸ ಶಸ್ತ್ರಚಿಕಿತ್ಸೆ: ವಿವಿಧ ENT ಶಸ್ತ್ರಚಿಕಿತ್ಸೆಗಳು ನಡೆಸುವ ಅವಕಾಶ ಶೋಧ ಮತ್ತು ಅಧ್ಯಾಪನ: ಸಂಶೋಧನೆ ಅಥವಾ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೋಧನೆ ಪ್ರೈವೇಟ್ ಪ್ರಾಕ್ಟೀಸ್: ಸ್ವಂತ ಇಒಖಿ ಕ್ಲಿನಿಕ್ ಆರಂಭಿಸುವ ಅವಕಾಶ ರಾಯಚೂರಿನಲ್ಲಿ, ನವೋದಯ ವೈದ್ಯಕೀಯ ಕಾಲೇಜು (NMC) ಮತ್ತು ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ (RIMS) ನಲ್ಲಿ ಒ.ಆ. ಪದವಿ ಪಡೆಯಬಹುದು.

1ನೇ ಪುಟದಿಂದ....


2029ರ ಲೋಕಸಭೆ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಇಬ್ಬರ ಮುಖದಲ್ಲಿ ಮಂದಹಾಸ: ಉಪಾಹಾರ ಕೂಟ ಮುಗಿಸಿ ಜಂಟಿ ಪತ್ರಿಕಾಗೋಷ್ಠಿಗೆ ಆಗಮಿಸಿದಾಗ, ಇಬ್ಬರ ಮುಖದಲ್ಲೂ ಮಂದಹಾಸ ಮಿನುಗುತ್ತಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಲು ಪ್ರಯತ್ನಿಸಿದಾಗ ಧ್ವನಿಯಲ್ಲಿ ಅಸ್ಪಷ್ಟತೆ ಇತ್ತು. ಪಕ್ಕದಲ್ಲಿ ಕುಳಿತಿದ್ದ ಡಿ.ಕೆ.ಶಿವಕುಮಾರ್ ಅವರು ಮೈಕ್ ತೆಗೆದುಕೊಂಡು ಸ್ವಿಚ್ ಆನ್ ಮಾಡಿ, ಸರಿ ಮಾಡಿ ಕೈಗೆ ಕೊಟ್ಟರು.

ಸಿದ್ದರಾಮಯ್ಯ ಅವರು, ಉಪಾಹಾರ ಚೆನ್ನಾಗಿತ್ತು. ನಾನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಶಾಸಕ ಎ.ಎಸ್.ಪುನ್ನಣ್ಣ ಮೂವರು ಉಪಾಹಾರ ಸೇವಿಸಿದ್ದೇವೆ. ಅಲ್ಲಿ ಏನೂ ಮಾತನಾಡಲಿಲ್ಲ ಎಂದು ಲಘು ಹಾಸ್ಯ ಮಾಡಿದರು.ಡಿ.ಕೆ.ಶಿವಕುಮಾರ್ ಅವರು ಇಂದು ತಮ ಮನೆಗೆ ಬಂದಿದ್ದರು. ಇಬ್ಬರೂ ಸೇರಿ ಉಪಾಹಾರ ಸೇವಿಸಿದ್ದೇವೆ. ಎಐಸಿಸಿ ಪ್ರಧಾನಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಪೊನ್ನಣ್ಣ ಅವರಿಗೆ ಕರೆ ಮಾಡಿ, ಮುಖ್ಯಮಂತ್ರಿ ಅವರು ಡಿ.ಕೆ.ಶಿವಕುಮಾರ್ ಅವರನ್ನು ಉಪಾಹಾರಕ್ಕೆ ಕರೆಯುವಂತೆ ಸೂಚಿಸಿದರು. ಅದೇ ಸಮಯದಲ್ಲಿ ಡಿ.ಕೆ.ಶಿವಕುಮಾರ್ ಅವರಿಗೂ ಕರೆ ಮಾಡಿ, ಉಪಾಹಾರಕ್ಕೆ ಹೋಗುವಂತೆ ಹೇಳಿದರು. ಈ ವೇಳೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯವರೇ ನಮ ಮನೆಗೆ ಊಟಕ್ಕೆ ಬರುವಂತೆ ಸಲಹೆ ನೀಡಿದರು.

# ಸೈಬರ್ ವಂಚನೆ ತಡೆಗೆ ಸರ್ಕಾರದ ತುರ್ತು ಹಸ್ತಕ್ಷೇಪಕ್ಕೆ 'ಸೋಲಿಡಾರಿಟಿ ಯೂತ್ ಮೂವ್ಮೆಂಟ್' ಮನವಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕರ್ನಾಟಕ ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸೈಬರ್ ವಂಚನೆ ಮತ್ತು ಡಿಜಿಟಲ್ ಅಪರಾಧಗಳ ಸರಣಿಯಿಂದ ಸಾಮಾನ್ಯ ನಾಗರಿಕರು ದೊಡ್ಡ ಪ್ರಮಾಣದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಮಾನಸಿಕ ಹಾನಿಗೆ ಒಳಗಾಗುತ್ತಿರುವ ಹಿನ್ನೆಲೆಯಲ್ಲಿ, ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ವತಿಯಿಂದ ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರದ ಮುಖ್ಯಮಂತ್ರಿ ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಲಾಯಿತು.**



ಕರ್ನಾಟಕದ ಸೈಬರ್ ಅಪರಾಧಗಳ ಗಂಭೀರತೆ, ದಾಖಲಾದ ಪ್ರಕರಣಗಳ ಸಂಖ್ಯೆ, ಜನರು ಕಳೆದುಕೊಂಡಿರುವ ಹಣದ ಮೊತ್ತ ಹಾಗೂ ವಂಚಕರ ಬಂಧನದ ಅತ್ಯಂತ ಕಡಿಮೆ ಪ್ರಮಾಣದ ಕುರಿತು ಸರ್ಕಾರದ ಅಧಿಕೃತ ಅಂಕಿ-ಅಂಶಗಳನ್ನು ಉಲ್ಲೇಖಿಸಲಾಗಿದೆ. ಈ ಅಂಕಿ-ಅಂಶಗಳ ಪ್ರಕಾರ, ರಾಜ್ಯದಲ್ಲಿನ ಪರಿಸ್ಥಿತಿಯು ತುರ್ತು ಹಸ್ತಕ್ಷೇಪಕ್ಕೆ ಅರ್ಹವಾಗಿರುವ ಗಂಭೀರ ಹಂತ ತಲುಪಿದೆ ಎಂದು ಸಂಸ್ಥೆಯು ಒತ್ತಿ ಹೇಳಿದೆ. ಸಂಸ್ಥೆಯ ಪ್ರಕಾರ, ದಾಖಲಾಗಿರುವ ಪ್ರಕರಣಗಳಿಗಿಂತ ಹೊರಗೆ ಹಲವು ಪ್ರಕರಣಗಳು ದೂರು ದಾಖಲಿಸದೇ ಉಳಿಯುತ್ತಿದ್ದು, ನಿಜವಾದ ನಷ್ಟದ ಪ್ರಮಾಣ ಹಲವು ಪಟ್ಟು ಹೆಚ್ಚಾಗಿದೆ. ಬ್ಯಾಂಕ್ ಖಾತೆಗಳನ್ನು ಖಾಲಿ ಮಾಡುವ, ವೈಯಕ್ತಿಕ ಮಾಹಿತಿ ದುರುಪಯೋಗ ಮಾಡುವ ಮತ್ತು ಸಾಮಾಜಿಕ ಅಶಾಂತಿ ಸೃಷ್ಟಿಸುವ ಈ ಅಪರಾಧಗಳು ಹೆಚ್ಚುತ್ತಿದ್ದು, ಅನೇಕ ನಾಗರಿಕರು ಆತ್ಮಹತ್ಯೆಗೆ ಸಹ ಮೊರೆ ಹೋಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ ಎಂದು ಹೇಳಿದೆ.

ಪ್ರಮುಖ ಬೇಡಿಕೆಗಳು: ಸೋಲಿಡಾರಿಟಿ ಯೂತ್ ಮೂವ್ಮೆಂಟ್ ರಾಜ್ಯ ಸರ್ಕಾರದ ಮುಂದೆ ಇರಿಸಿರುವ ಪ್ರಮುಖ ಬೇಡಿಕೆಗಳು ಏನೆಂದರೆ, ಡಿಸೆಂಬರ್ 8, 2025 ರಂದು ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ಸೈಬರ್ ವಂಚನೆ ವಿಷಯವನ್ನು ಮುಖ್ಯ ಚರ್ಚಾ ವಿಷಯವಾಗಿ ಸೇರಿಸಿ ಕಠಿಣ ಹಾಗೂ ಸ್ಪಷ್ಟ ನೀತಿಯನ್ನು ರೂಪಿಸಬೇಕು. ಇದರ ಜೊತೆಗೆ, ವಂಚನೆಗೆ ಒಳಗಾದ ನಾಗರಿಕರ ಹಣದ ಭದ್ರತೆಗೆ ಸರ್ಕಾರವೇ ಖಾತರಿ ನೀಡುವ ರಕ್ಷಣಾ ಕ್ರಮಗಳನ್ನು ತುರ್ತಾಗಿ ರೂಪಿಸಬೇಕು. ಹಾಗೆಯೇ, ರಾಜ್ಯ ಮಟ್ಟದ ಸ್ವತಂತ್ರ ಸೈಬರ್ ಸಹಾಯವಾಣಿ ಸಂಖ್ಯೆಯನ್ನು ತಕ್ಷಣ ಸ್ಥಾಪಿಸಬೇಕು ಮತ್ತು ಯುವಕರು ಹಾಗೂ ನಾಗರಿಕರಿಗೆ ಸೈಬರ್ ಸುರಕ್ಷತೆ, ಹ್ಯಾಕಿಂಗ್ ತಡೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಜಾರಿಗೆ ತರಬೇಕು ಎಂಬುದು ಇನ್ನೊಂದು ಪ್ರಮುಖ ಬೇಡಿಕೆಯಾಗಿದೆ.

ಅಂತಿಮವಾಗಿ, ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕವು ಸಲ್ಲಿಸಲಿರುವ ತಾಂತ್ರಿಕ ಶಿಫಾರಸ್ಸುಗಳು ಮತ್ತು ನೀತಿ ಸಲಹೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಅನುಷ್ಠಾನಗೊಳಿಸಬೇಕು ಎಂದೂ ಸಹ ಮನವಿ ಮಾಡಿದೆ. ಸೈಬರ್ ಅಪರಾಧ ತಡೆಯುವುದು ಕೇವಲ ಕಾನೂನು ಮತ್ತು ತಾಂತ್ರಿಕ ಸವಾಲು ಮಾತ್ರವಲ್ಲ, ಜನರ ಹಣ, ಬದುಕು ಮತ್ತು ಭವಿಷ್ಯವನ್ನು ರಕ್ಷಿಸುವ ಸಾಮಾಜಿಕ ಜವಾಬ್ದಾರಿಯೂ ಆಗಿದೆ ಎಂದು ಸಂಸ್ಥೆ ಹೇಳಿದೆ.

ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಡಿಜಿಟಲ್ ಸುರಕ್ಷತೆ ಕುರಿತು ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳುವುದಾಗಿ ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕ ತಿಳಿಸಿದ್ದು, ಸರ್ಕಾರದೊಂದಿಗೆ ಸಹಕಾರದಿಂದ ಪರಿಣಾಮಕಾರಿ ಪರಿಹಾರ ಕಂಡುಕೊಳ್ಳುವ ಬದ್ಧತೆಯನ್ನು ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷರಾದ ನಾಸಿರ್ ಅಲಿ, ಕಾರ್ಯದರ್ಶಿಗಳಾದ ಮಹಮ್ಮದ್ ಹಾರೂನ್ ,ಖಜಾಂಚಿ ಗಫರ್ ಖಾನ್ ಮೊಹಮ್ಮದ್ ಕೆ.ಎಂ.ಭಾಷಾ ಶೇಕ್ ಇಸಾಕ್ ಮೊಹಮ್ಮದ್ ಸೈಫ್ ಇನ್ನಿತರ ಕಾರ್ಯಕರ್ತರು ಉಪಸ್ಥಿತರಿದ್ದರು.

# ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಿ: ಜಯಕಾಂತಮ್ಮ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಜನವೇದಿಕೆ ಮತ್ತು ಕರ್ನಾಟಕ ಜನಾರೋಗ್ಯ ಚಳುವಳಿ ವತಿಯಿಂದ ಆರೋಗ್ಯ ಸಚಿವರಿಗೆ ಗ್ರೇಡ್-2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಜನವೇದಿಕೆಯ ಜಯಕಾಂತಮ್ಮ ಮಾತನಾಡಿ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರು, ನರ್ಸ್ಗಳು, ಪ್ರಯೋಗಾಲಯ ತಂತ್ರಜ್ಞರು, ಔಷಧವಿತರಕರ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು.**

ಪಿಎಚ್ಸಿ ಗಳಿಗೆ ಅಗತ್ಯ ಮೂಲಸೌಕರ್ಯ, ಔಷಧಿಗಳು ಮತ್ತು ತುರ್ತು ಸೇವೆಗಳನ್ನು ಒದಗಿಸಬೇಕು. ಗರ್ಭಿಣಿ ಮಹಿಳೆಯರಿಗೆ ಡಟ್ಸಾ ಮಾದರಿಯಲ್ಲಿ ಐ.ಎಫ್.ಎ. ಮಾತ್ರೆಗಳನ್ನು ಒದಗಿಸಬೇಕು ಹಾಗೂ ಪ್ರತೀ ತಿಂಗಳ 9ನೇ ತಾರೀಖಿನಂದು ಪಿ.ಎಂ.ಎಸ್.ಎಂ.ಎ. ಗರ್ಭಪೂರ್ವ ಕ್ಲಿನಿಕ್‌ಗಳಲ್ಲಿ ಪ್ರಸೂತಿ ತಜ್ಞರಿಂದ ಚಿಕಿತ್ಸೆ ಕೊಡಿಸಬೇಕು. ಗರ್ಭಪೂರ್ವ ಆರೈಕೆ, ಪೌಷ್ಠಿಕತೆ ಮತ್ತು ಸುರಕ್ಷಿತ ಪ್ರಸವ ಸೇರಿದಂತೆ ತಾಯಂದಿರ ಆರೋಗ್ಯ ಸೇವೆಗಳನ್ನು ಎಲ್ಲಾ ಮಟ್ಟಗಳಲ್ಲಿ ಬಲಪಡಿಸಬೇಕು. ಅಂಗನವಾಡಿ ಮತ್ತು ಶಾಲಾ ಆರೋಗ್ಯ ಕಾರ್ಯಕ್ರಮಗಳಿಗೆ ಸಮರ್ಪಕ ಬಜೆಟ್ ಹಾಗೂ ಸಿಬ್ಬಂದಿ ಒದಗಿಸಬೇಕು.

ಕೇಂದ್ರಿತ ಬಿ.ಐ.ಎಸ್. ಪ್ರಮಾಣಿತ ಘಟಕಗಳ ಬದಲು ಮಹಿಳಾ ಪೂರಕ ಪೌಷ್ಠಿಕ ಉತ್ಪಾದನಾ ಕೇಂದ್ರಗಳನ್ನು ಪುನರುಜ್ಜೀವನಗೊಳಿಸಿ ಉತ್ತಮ ಗುಣಮಟ್ಟದ ಪೌಷ್ಠಿಕ ಆಹಾರ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಗ್ರಾಮ ಮತ್ತು ತಾಲ್ಲೂಕು ಮಟ್ಟದಲ್ಲಿ ಆರೋಗ್ಯ ಸಮಿತಿಗಳನ್ನು ರಚಿಸಿ, ಅವುಗಳನ್ನು ಸಬಲಗೊಳಿಸಬೇಕು ಸಾರ್ವಜನಿಕರ ಆರೋಗ್ಯವನ್ನು ಬಲಪಡಿಸುವುದು ಜನರ ಮೂಲಭೂತ ಹಕ್ಕು ಮತ್ತು ಸರ್ಕಾರದ ಕರ್ತವ್ಯವಾಗಿದೆ ಎಂದು ತಿಳಿಸಿದರು. ಪಟ್ಟಣದ ಬಸವ ವೃತ್ತದಿಂದ ತಹಸೀಲ್ದಾರ್ ಕಚೇರಿಯವರೆಗೆ ನೂರಾರು ಮಹಿಳೆಯರು ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ಮೂಲಕ ಆಗಮಿಸಿ ಮನವಿ ಸಲ್ಲಿಸಿದರು. ಕರ್ನಾಟಕ ಜನಾರೋಗ್ಯ ಚಳುವಳಿಯ ಅಖಿಲ ವಾಸನ್,ರವೀಂದ್ರ ಜನೆಕಲ್, ಲಕ್ಷ್ಮಣ ಜಾನೆಕಲ್, ಬಸವಲಿಂಗಮ್ಮನಾಗಮ್ಮ, ಲಕ್ಷ್ಮೀ ಶಾಂತಮ್ಮ,ರಾಮಮ್ಮ,ಶಕುಂತಲ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದರು. ಮನವಿ ಸಲ್ಲಿಸಲಾಯಿತು.






# ಸ್ಪಂದನ ಸಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಅರಕೇರಾ ಸಹಕಾರಿ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಅರಕೇರಾ ಪಟ್ಟಣದಲ್ಲಿನ ಸ್ಪಂದನ ಸಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಅರಕೇರಾ ತಾ॥ ದೇವದುರ್ಗ ,ಜಿಲ್ಲೆ॥ರಾಯಚೂರು ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯು ಸಹಕಾರಿಯ ಕಛೇರಿಯಲ್ಲಿ ದಿನಾಂಕ:15-12-2025 ಸೋಮವಾರ ರಂದು ನಡೆಯಲಿದೆ ಎಂದು ಜಗದೀಶ ಲೆಕ್ಕಪರಿಶೋಧಕರು ರಿಟರ್ನಿಂಗ ಅಧಿಕಾರಿಗಳು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ನಾಮ ಪತ್ರ ಸಲ್ಲಿಸಲು ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಪ್ರಾರಂಭದ ದಿನಾಂಕ: 1-12-2025 ಕೊನೆಯ ದಿನಾಂಕ:8-.12.-2025 ರ ಮದ್ಯಾಹ್ನ 3-00 ಗಂಟೆಯವರೆಗೆ, ದಿನಾಂಕ:9-12.2025 ರಂದು ನಾಮಪತ್ರಗಳ ಪರಿಶೀಲನೆ ಹಾಗೂ ದಿನಾಂಕ:10-12-2025 ರಂದು ಮದ್ಯಾಹ್ನ 3-00 ಗಂಟೆಯವರೆಗೆ ನಾಮಪತ್ರ ವಾಪಸ್ಸು ಪಡೆಯಲು ಕೊನೆಯ ದಿನವಾಗಿರುತ್ತದೆ. ಸಹಕಾರಿಯ ಸದಸ್ಯರುಗಳಿಗೆ ಈಗಾಗಲೇ ಚುನಾವಣಾ ವೇಳಾ ಪಟ್ಟಿಯನ್ನು ಕಳುಹಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಹಕಾರಿ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆಯೆಂದು ಪ್ರಕಟಣೆಯ ಮೂಲಕ ತಿಳಿಸಿದೆ.

# ಅನ್ವಿತಾ ಪದವಿಪೂರ್ವ ಕಾಲೇಜ್ ವತಿಯಿಂದ ಸಾಲುಮರದ ತಿಮ್ಮಕ್ಕನವರಿಗೆ ಹಸಿರು ನಮನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

**ವಿದ್ಯಾ ಸಂಸ್ಕಾರ ಸಮೂಹ ಶಿಕ್ಷಣ ಸಂಸ್ಥೆಗಳ* ಅನ್ವಿತಾ ಪದವಿಪೂರ್ವ ಕಾಲೇಜ್ ಮತ್ತು ವನಸಿರಿ ಫೌಂಡೇಶನ್ (ರಿ) ರಾಯಚೂರು ಆಲದಮರ ಸುತ್ತ ಮುತ್ತ ಸ್ವಚ್ಛತೆ ಮಾಡಿ ,ಸಾಲುಮರದ ತಿಮ್ಮಕ್ಕ ಅಮ್ಮನವರ ಅವರಿಗೆ ಪೂಜೆ ಸಲ್ಲಿಸಿ,**

ಗಿಡ ನೆಟ್ಟು ಹಸಿರು ನಮನ, *ಕಾರ್ಯಕ್ರಮವನ್ನು ಗ್ರಾಮೀಣ ಸಿಪಿಐ ಶ್ರೀ ವಿನಾಯಕ ಅವರು ಉದ್ಘಾಟಿಸಿದರು ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರು,



ಟಿ ಅಧಿಕಾರಿಗಳು,NSS ವಿದ್ಯಾರ್ಥಿಗಳು, ಪರಿಸರ ಪ್ರೇಮಿಗಳು ಭಾಗಿಯಾಗಿದ್ದರು.

# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು ನವೆಂಬರ್ 28 (ಕರ್ನಾಟಕ ವಾರ್ತೆ): ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಅರ್ಹ ಸಾಧಕ ಕ್ರೀಡಾಪಟುಗಳು ಹಾಗೂ ಇತರರಿಂದ ವಿವಿಧ ಪ್ರಶಸ್ತಿ ಪ್ರೋತ್ಸಾಹಧನ ನೀಡುವ ಯೋಜನೆಗಳು ಚಾಲ್ತಿಯಲ್ಲಿದ್ದು ವಿವಿಧ ಕಾರ್ಯಕ್ರಮಗಳಡಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

2024ನೇ ಸಾಲಿನ ಏಕಲವ್ಯ ಪ್ರಶಸ್ತಿ, ಜೀವಮಾನ ಸಾಧನೆ ಪ್ರಶಸ್ತಿ, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ, ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ, 2025-26ನೇ ಸಾಲಿನ ಗುರಿ - ಒಲಂಪಿಕ್ ಪದಕ, 2023 ಮತ್ತು 2024ನೇ ಸಾಲಿನ ನಗದು ಪುರಸ್ಕಾರ, 2025-26ನೇ ಸಾಲಿನ ಶೈಕ್ಷಣಿಕ ಶುಲ್ಕ ಮರುಪಾವತಿ ಹಾಗೂ ಕ್ರೀಡಾ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಿಗೆ ಅರ್ಹ ಇರುವ ಕ್ರೀಡಾಪಟುಗಳು ಇಲಾಖೆಯ ವೆಬ್‌ಸೈಟ್ https://sevasindhu.karnataka.gov.in gÀ ಮೂಲಕ ಡಿಸೆಂಬರ್ 03ರೊಳಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇಶದ ಅತ್ಯುತ್ತಮ ಪೊಲೀಸ್ ಠಾಣೆಯಲ್ಲಿ ಪ್ರಶಸ್ತಿ ಸ್ವೀಕರಿಸಿದ ಕವಿತಾಳ ಪೊಲೀಸ್ ಠಾಣೆಯ ಪಿಎಸ್ಐ ಗುರುಚಂದ್ರ ಯಾದವ್




ನೈಜ್ಯ ದೆಸೆ ನ್ಯೂಸ್

**ದೇಶದ 3 ನೇ ಅತ್ಯುತ್ತಮ ಪೊಲೀಸ್ ಠಾಣೆ ಪ್ರಶಸ್ತಿಗೆ ಆಯ್ಕೆಯಾದ ರಾಯಚೂರ ನ ಕವಿತಾಳ ಪೊಲೀಸ್ ಠಾಣೆಯ ಪಿಎಸ್ಐ ಗುರುಚಂದ್ರ ಯಾದವ್ ಅವರು ಛತ್ತೀಸಗಢದ ರಾಯಪುರ ನಲ್ಲಿ ನಡೆದ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರಿಂದ ದೇಶದ ಅತ್ಯುತ್ತಮ ಪೊಲೀಸ್ ಠಾಣೆಯಲ್ಲಿ ಪ್ರಶಸ್ತಿ ಸ್ವೀಕರಿಸಿದರು.**

# ಸಮುದಾಯದ ಬಲವರ್ದನೆಗೆ ನೋಂದಣಿ ಮಾಡಿಸಿ: ಶಾಸಕ ಐಹೊಳೆ

ನೈಜ್ಯ ದೆಸೆ ನ್ಯೂಸ್

**ಹುಕ್ಕೇರಿ: ರಾಜ್ಯದಲ್ಲಿ ಒಕ್ಕಲಿಗರ ಸಂಘ, ವೀರಶೈವ ಮಹಾಸಭಾ, ಕುರುಬರ ಸಂಘದ ರೀತಿಯಲ್ಲಿ ನಮ್ಮ ಮಾದರ ಮಹಾಸಭಾ ಕಟ್ಟಲು ತೀರ್ಮಾನಿಸಿದ್ದು, ಪದಾಧಿಕಾರಿಗಳು ಸಮುದಾಯದ ಸದಸ್ಯತ್ವ ನೊಂದಣಿ ಮಾಡಿಸಲು ಮುಂದಾಗಬೇಕು ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿದರು.**



ಹುಕ್ಕೇರಿ ನಗರದ ಬಾಬು ಜಗಜೀನ್ ರಾವ್ ಭವನದಲ್ಲಿ ಕರ್ನಾಟಕ ಮಾದರ ಮಹಾಸಭಾ ವತಿಯಿಂದ ಕರ್ನಾಟಕ ಮಾದರ ಮಹಾಸಭಾದ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸಮಾಜದ ಏಳ್ಗೆಗಾಗಿ ಸಮಾಜದ ಮಕ್ಕಳ ಭವಿಷ್ಯಕ್ಕಾಗಿ ರಾಜ್ಯದಲ್ಲಿ ಮಹಾಸಭಾ ಅವಶ್ಯಕತೆ ಇದೆ. ಅಲ್ಲದೇ ಸಮುದಾಯದ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುವುದು ಮಹಾಸಭಾದ ಪ್ರಮುಖ ಉದ್ದೇಶವಾಗಿದೆ. ಸಮುದಾಯದ ಜನರ ಸಂಕಷ್ಟಕ್ಕೆ ಸ್ಪಂದಿಸಲು ನೆರವಾಗುವಂತೆ ದೊಡ್ಡ ಮಟ್ಟದಲ್ಲಿ ಮಹಾಸಭಾವನ್ನು ಕಟ್ಟಲು ನೀವೆಲ್ಲಾ ಮುಂದಾಗಬೇಕು. ನಾವೆಲ್ಲಾರು ಪಕ್ಷಾತೀತವಾಗಿ ಕಟ್ಟಲು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇವೆ ಎಂದು ಅವರು ತಿಳಿಸಿದರು.

ಯರನಾಳದ ಸುಕ್ಷೇತ್ರ ಮಠದ ಬ್ರಹ್ಮಾನಂದ ಮಹಾಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಈ ವೇಳೆ ಅನಂತ್ ಕುಮಾರ್ ಬ್ಯಾಕೋಡ, ರಾಜೇಂದ್ರ ಐಹೊಳೆ, ಸುರೇಶ ಐಹೊಳೆ, ಬಸವರಾಜ ದೊಡ್ಡಮನಿ, ಮಹೇಶ ಹಟ್ಟಿಹೊಳಿ, ಸುನಿತಾ ಐಹೊಳೆ, ಕಾಡೇಶ ಹೊಸಮನಿ, ಕರೇಪ್ಪಾ ಗುಡೆನ್ನವರ್, ಸರಿಕರ್ ಸರ್, ಶಂಕರ ಕಟ್ಟಿಮನಿ, ಶಶಿಕಾಂತ ಹೊನ್ನಳ್ಳಿ , ರವಿ ಈರಗಾರ, ಶಂಕರ್ ಗಂಟಿ, ಬಾಳೇಶ್ ಪೂಜಾರಿ, ಸಿದ್ದಪ್ಪ ಹೊಸಮನಿ, ಬಂಡೆಪ್ಪ ಮಾದರ್, ರಘು ಮಾದರ್, ವಿಠ್ಠಲ್ ಮಾದರ್, ರಾಜು ಐಹೊಳೆ ಹಾಗೂ ಅನೇಕ ಸಮಾಜದ ಮುಖಂಡರು ಹಾಜರಿದ್ದರು.